ಕನ್ನಡದ ಕಣ್ವ
ಬಿ. ಎಂ. ಶ್ರೀ



ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು-೧೯

ಬಿ. ಎಂ. ಶ್ರೀ ಜನ್ಮ ಶತಮಾನೋತ್ಸವ ಪ್ರಕಟನ ಮಾಲೆ

1. ಶ್ರೀವಾಣಿ (ಸೂಕ್ತಿಗಳ ಸಂಗ್ರಹ)
2. ಆಚಾರ್ಯ ಬಿ. ಎಂ. ಶ್ರೀ (ಜೀವನ ಪರಿಚಯ)
3. ಕನ್ನಡದ ಕಣ್ವ ಬಿ. ಎಂ. ಶ್ರೀ (ಮಕ್ಕಳಿಗೆ)
4. ಶ್ರೀನಿಧಿ (ಸಂಸ್ಮರಣ ಸಂಪುಟ)
5. ಶ್ರೀಗಂಧ (ಸಂಸ್ಮರಣ ಸಂಚಿಕೆ)
6. ಗದಾಯುದ್ಧ ನಾಟಕ (ಸರಳ ಗದ್ಯಾನುವಾದ)
7. ಅಶ್ವತ್ಥಾಮನ್ ,,
8. ಪಾರಸಿಕರು ,,
9. 'ಶ್ರೀ' ನಾಟಕ ಕತೆಗಳು (ಮಕ್ಕಳಿಗೆ)
10. ಶ್ರೀಯವರ ವಿವಿಧ ಆಕಾರದ ವರ್ಣಚಿತ್ರಗಳು
11. B. M. S. - The Man and His Mission (Commemorative Volume)
12. ಶ್ರೀಯವರ ಸ್ವತಂತ್ರ ಕವಿತೆಗಳು

KANNADADA KANVA B.M.SRI.
A Life-sketch for Children by H. Srinivasaiah,
Publishers : B.M.Sri. Smaraka Pratishthana,
54, Aravinda, III Cross Road, Bangalore-560 019
Pp : 44+viii 5,000 Copies. First Edition, January 3, 1984

ಬೆಲೆ ರೂ.

ಪ್ರಕಟನೆ : ಬಿ.ಎಂ.ಶ್ರೀ. ಜನ್ಮದಿನ
(ಜನವರಿ ೩, ೧೯೮೪)

ಮುದ್ರಣ : ಅಶ್ವಥ್ ಪ್ರಿಂಟರ್ಸ್
೪೪೩, ೧ನೇ ಮುಖ್ಯ ಬೀದಿ, ೪೪ನೇ ಅಡ್ಡಬೀದಿ,
೬ನೇ ಬ್ಲಾಕ್, ಜಯನಗರ, ಬೆಂಗಳೂರು–೫೬೦ ೦೮೨.

ಮುನ್ನುಡಿ

ಕನ್ನಡ ನಾಡಿನ ಏಕೀಕರಣಕ್ಕಾಗಿ, ಕನ್ನಡ ನುಡಿಯ ಏಳಿಗೆಗಾಗಿ ತಮ್ಮ ಬಾಳನ್ನು ಮುಡಿಪಾಗಿಟ್ಟು ಹಲವು ಹಿರಿಯರು ಮನಮುಟ್ಟಿ ದುಡಿದರು. ಈ ಶತಮಾನದ ಮೊದಲಲ್ಲಿ ನಾಡು ಹರಿದು ಹಂಚಿ ಹೋಗಿತ್ತು, ನುಡಿ ಕಳೆಗುಂದಿತ್ತು. ಅನ್ಯಭಾಷೆಗಳ ವ್ಯಾಮೋಹದಿಂದ ಕನ್ನಡ ಜನರು ತಮ್ಮತನವನ್ನು ಕಳೆದುಕೊಂಡಿದ್ದರು. ಇಂಥ ಪರಿಸ್ಥಿತಿಯಲ್ಲಿ ಮತ್ತೆ ಕನ್ನಡವು ತಲೆಯೆತ್ತುವಂತೆ, ನಾಡು ಒಂದಾಗುವಂತೆ ಶ್ರಮಿಸಿದ ಹಿರಿಯರನ್ನು ಕೃತಜ್ಞತೆಯಿಂದ ನೆನೆಯುವುದು, ಅವರ ಜೀವನ ಮತ್ತು ಸಾಧನೆಗಳನ್ನು ತಿಳಿದುಕೊಳ್ಳುವುದು, ಅವುಗಳಿಂದ ಪ್ರೇರಣೆಯನ್ನು ಪಡೆದು ನಾಡುಕಟ್ಟುವ ಕೆಲಸದಲ್ಲಿ ತೊಡಗುವುದು ಇಂದಿನ ಹಾಗೂ ಮುಂದಿನ ಪೀಳಿಗೆಗಳ ಕರ್ತವ್ಯವಾಗಿದೆ.

ಈ ದೃಷ್ಟಿಯಿಂದ ಬಿ. ಎಂ. ಶ್ರೀ ಪ್ರತಿಷ್ಠಾನವು ದಿವಂಗತ ಬಿ. ಎಂ. ಶ್ರೀಕಂಠಯ್ಯನವರ ಜನ್ಮ ಶತಮಾನೋತ್ಸವವನ್ನು ಅರ್ಥಪೂರ್ಣವಾಗಿ ನೆರವೇರಿಸಲು ಸಂಕಲ್ಪಿಸಿದೆ. ಈ ಸಂದರ್ಭದಲ್ಲಿ ಶ್ರೀಯವರ ಜೀವನ ಮತ್ತು ಸಾಧನೆಗಳ ಪರಿಚಯವನ್ನು ನಾಡಿನ ಜನತೆಗೆ, ವಿಶೇಷವಾಗಿ ಶ್ರಿಸಾಮಾನ್ಯನಿಗೆ ಮತ್ತು ಬೆಳೆಯುತ್ತಿರುವ ಮಕ್ಕಳಿಗೆ ಮಾಡಿಕೊಡಬೇಕೆಂದು ಅವರ ಜೀವನ ಚರಿತ್ರೆಯನ್ನು ಪ್ರಕಟಿಸುವುದಲ್ಲದೆ ಅವರ ಕೆಲವು ಕೃತಿಗಳ ಆಶಯವನ್ನು ಸರಳವಾದ ರೂಪದಲ್ಲಿ ನಿರೂಪಿಸುವ ಚಿಕ್ಕ ಪುಸ್ತಕಗಳನ್ನು ಹೊರ ತರಬೇಕೆಂದು ಉದ್ದೇಶಿಸಿದೆ. ಇದರಿಂದ ಶ್ರೀಯವರು ಕನ್ನಡದ ಸರ್ವತೋಮುಖವಾದ ಅಭಿವೃದ್ಧಿಗಾಗಿ, ಹೊಸ ಸಾಹಿತ್ಯದ ನಿರ್ಮಾಣಕ್ಕಾಗಿ ಎಂಥ ಅಮೋಘ ಕಾರ್ಯವನ್ನು ಮಾಡಿದರು ಎಂಬುದರ ಅರಿವು ಉಂಟಾಗುವುದೆಂದು ಹಾರೈಸಲಾಗಿದೆ.

ಶತಮಾನೋತ್ಸವ ಗ್ರಂಥ ಪ್ರಕಟನ ಸಮಿತಿಯ ವಿನಂತಿಯನ್ನು ಮಾನ್ಯಮಾಡಿ ಮಕ್ಕಳಿಗೋಸ್ಕರ ಪತ್ರರೂಪದಲ್ಲಿ ಶ್ರೀಯವರ ಜೀವನ ಚರಿತ್ರೆಯನ್ನು ಸಾಧ್ಯವಾದಷ್ಟು ಸರಳ ಭಾಷೆಯಲ್ಲಿ ಗಣ್ಯ ಲೇಖಕರಾದ ಶ್ರೀ. ಹೊ. ಶ್ರೀನಿವಾಸಯ್ಯನವರು ಬರೆದಿದ್ದಾರೆ. ಅವರಿಗೆ ಸಮಿತಿಯು ಹೃತ್ಪೂರ್ವಕವಾದ ಕೃತಜ್ಞತೆಗಳು ಸಲ್ಲುತ್ತದೆ.

೮-೧೨-೧೯೬೩

ರಂ. ಶ್ರೀ. ಮುಗಳಿ

ಅಧ್ಯಕ್ಷರು, ಗ್ರಂಥ ಪ್ರಕಟಣ ಸಮಿತಿ.

ಉಪಕಾರ ಸ್ಮರಣೆ

ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನ ೧೯೮೪ನೆಯ ವರ್ಷದ ಉದ್ದಕ್ಕೂ ಬಿ. ಎಂ. ಶ್ರೀ ಜನ್ಮ ಶತಮಾನೋತ್ಸವವನ್ನು ವೈವಿಧ್ಯಪೂರ್ಣವಾಗಿ ಆಚರಿಸಲು ನಿರ್ಧರಿಸಿತು. ಅದರ ಅಂಗವಾಗಿ ಬಿ. ಎಂ. ಶ್ರೀಯವರ ವ್ಯಕ್ತಿತ್ವ. ಕೃತಿಗಳು ಮತ್ತು ಸಾಧನೆಗಳನ್ನು ಕುರಿತು ಕೆಲವು ಪುಸ್ತಕಗಳನ್ನು ಪ್ರಸಿದ್ಧ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಬೇಕೆಂದು ಉತ್ಸವ ಸಮಿತಿ ನಿರ್ಧರಿಸಿತು. ಪುಸ್ತಕ ಪ್ರಕಟನೆಗಳ ಕಾರ್ಯವನ್ನು ನೋಡಿಕೊಳ್ಳಲು ಒಂದು ಪ್ರಕಟನೆ ಸಮಿತಿಯನ್ನು ನಿಯೋಜಿಸಲಾಯಿತು. ಖ್ಯಾತ ಹಿರಿಯ ಸಾಹಿತಿಗಳಾದ ಡಾ॥ ರಂ. ಶ್ರೀ ಮುಗಳಿ ಅದರ ಅಧ್ಯಕ್ಷರಾಗಿದ್ದುಕೊಂಡು ದೊಡ್ಡ ಉಪಕಾರ ಮಾಡಿದ್ದಾರೆ. ಬರೆದು ಬಂದ ಹಸ್ತ ಪ್ರತಿಗಳನ್ನು ಪರಿಶೀಲಿಸಿ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರಿಗೆ ಪ್ರತಿಷ್ಠಾನ ಅತ್ಯಂತ ಋಣಿಯಾಗಿದೆ.

ಪುಸ್ತಕಗಳ ಪ್ರಕಟನ ಕಾರ್ಯದಲ್ಲಿ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರ ಅನುಭವಪೂರ್ಣ ಮಾರ್ಗದರ್ಶನದಿಂದ ಪ್ರತಿಷ್ಠಾನ ತುಂಬ ಉಪಕೃತವಾಗಿದೆ.

ತಮ್ಮ ಪ್ರೀತಿಯ ಪುತ್ರಿ ಶಶಿಗೆ ಬರೆದ ಪತ್ರಗಳ ರೂಪದಲ್ಲಿ ಕನ್ನಡದ ಕಣ್ವ ಬಿ. ಎಂ ಶ್ರೀ ಅವರನ್ನು ಕುರಿತು ಈ ಕಿರು ಹೊತ್ತಿಗೆಯನ್ನು ಬಿ. ಎಂ. ಶ್ರೀ ಪ್ರತಿಷ್ಠಾನದ ಮೇಲಿನ ಅಭಿಮಾನದಿಂದ ಬರೆದುಕೊಟ್ಟಿರುವ

ಶ್ರೀ ಹೊ. ಶ್ರೀನಿವಾಸಯ್ಯನವರು ಆಕರ್ಷಕವಾದ ಶೈಲಿಯಲ್ಲಿ ಮಕ್ಕಳಿಗಾಗಿ ಪ್ರವಾಸ ಕಥನಗಳನ್ನು ಬರೆಯುವುದರಲ್ಲಿ ಸಿದ್ಧಹಸ್ತರು. ಈ ಪುಸ್ತಕದಲ್ಲಿ ಹೊಸ ವಿಧಾನವನ್ನು ಅನುಸರಿಸಿದ್ದಾರೆ. ಶ್ರೀಯುವರ ಜೀವನ ಕಥೆಯನ್ನು ಮಕ್ಕಳಿಗಾಗಿ ಸೊಗಸಾಗಿ ಬರೆದುಕೊಟ್ಟ ಲೇಖಕರಿಗೆ ಪ್ರತಿಷ್ಠಾನ ಕೃತಜ್ಞವಾಗಿದೆ.

ಪುಸ್ತಕವನ್ನು ಅತ್ಯಲ್ಪಕಾಲದಲ್ಲಿ ಮುದ್ದಾಗಿ ಮುದ್ರಿಸಿಕೊಟ್ಟಿರುವ ಅಶ್ವಥ್ ಪ್ರಿಂಟರ್ಸ್ ಅವರಿಗೆ ನಮ್ಮ ವಂದನೆಗಳು. ಚಿತ್ರಗಳ ಪಡಿಯಚ್ಚುಗಳನ್ನು ಎರವಲಾಗಿ ಕೊಟ್ಟಿರುವ ರಾಷ್ಟ್ರೋತ್ಥಾನ ಪರಿಷತ್ತಿಗೂ ನಮ್ಮ ವಂದನೆಗಳು.

ಎಂ. ವಿ. ಸೀತಾರಾಮಯ್ಯ
ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿ,
ಮತ್ತು
ಉಪಾಧ್ಯಕ್ಷ, ಉತ್ಸವ ಸಮಿತಿ

ಆಚಾರ್ಯಪುರುಷ ಬಿ.ಎಂ.ಶ್ರೀ.

ಪತ್ರ—1

ನವೆಂಬರ್ 1, 1983
ಬೆಂಗಳೂರು

ನನ್ನ ಪ್ರೀತಿಯ ಅಪ್ಪಾಜಿ,

ಈ ದಿನ ಕನ್ನಡ ರಾಜ್ಯೋತ್ಸವ. ನಮ್ಮ ಶಾಲೆಯಲ್ಲಿಯೂ ರಾಜ್ಯೋತ್ಸವ ನಡೆಯಿತು. ಈ ವರ್ಷ ಒಂದು ವಿಶೇಷ ಉತ್ಸವ. ಹಿರಿಯ ಸಾಹಿತಿಗಳಾದ ಪ್ರೊ॥ ಎಂ. ವಿ. ಸೀತಾರಾಮಯ್ಯನವರನ್ನು ನಮ್ಮ ಶಾಲೆಗೆ ಕರೆಸಿದ್ದರು. ನಿಮಗೆ ಇವರು ಗೊತ್ತಿರಬೇಕಲ್ಲ ಅಪ್ಪಾಜಿ. ನೀವು ಆಗಾಗ ಇವರ ಹೆಸರನ್ನು ಹೇಳುತ್ತಿದ್ದಿರಿ. ಇವರು ಶಾಲೆಯಲ್ಲಿ ಕನ್ನಡ ಬಾವುಟವನ್ನ ಹಾರಿಸಿದರು. ನಮಗೆ ಕನ್ನಡ ನಾಡಿನ ಚರಿತ್ರೆ ಮತ್ತು ಸಾಹಿತಿಗಳ ಪರಿಚಯ ಮಾಡಿಸಿದರು. ಮುಖ್ಯವಾಗಿ ಬಿ. ಎಂ. ಶ್ರೀಕಂಠಯ್ಯನವರನ್ನು. ಇವರು ಕನ್ನಡದ ಅಡಿಗಲ್ಲು; ಆಧಾರಸ್ತಂಭ ಎಂದೆನಿಸಿದ್ದಾರೆ ಎಂದರು. ಬರುವ ವರ್ಷ ಇವರ ನೂರನೇ ಹುಟ್ಟು ಹಬ್ಬ

ವಂತೆ. ಅದರ ಆಚರಣೆಯ ವಿಚಾರ ನಮಗೆ ವಿವರಿಸಿದರು. ನೀವಾಗಲೇ ಈ ವಿಚಾರ ಪತ್ರಿಕೆಗಳಲ್ಲಿ ಓದಿರಬಹುದು.

"ಏರಿಸಿ ಹಾರಿಸಿ ಕನ್ನಡದ ಬಾವುಟ
ಓಹೋ ಕನ್ನಡ ನಾಡು, ಆಹಾ ಕನ್ನಡ ನುಡಿ !
ಹಾರಿಸಿ, ತೋರಿಸಿ, ಕೆಚ್ಚೆದೆಯ ಬಾವುಟ !
ಬಾಳು ಎಲೆ ಬಾವುಟ !
ಬಾಳ್ ಕನ್ನಡ ತಾಯ್
ಏಳ್ ಕನ್ನಡ ತಾಯ್
ಆಳ್ ಕನ್ನಡ ತಾಯ್
ಕನ್ನಡಿಗರೊಡತಿ ಓ ರಾಜೇಶ್ವರಿ"

ಈ ಹಾಡನ್ನು ಹಾಡಿ ಅರ್ಥ ವಿವರಿಸಿದರು. "ಈ ಹಾಡನ್ನು ರಚಿಸಿದವರು ಬಿ.ಎಂ.ಶ್ರೀ. ಕನ್ನಡ ನಾಡಿಗೆ ಕನ್ನಡ ಬಾವುಟವನ್ನ ಕೊಟ್ಟವರು. ಕನ್ನಡ ಬಾವುಟ ಗೀತೆಯನ್ನ ನಮಗೆ ಕಾಣಿಕೆ ಯಾಗಿ ಕೊಟ್ಟು, ಹಾಡಿ, ಎಲ್ಲರಿಂದಲೂ ಹಾಡಿಸಿದವರು. ಇವರ ನೂರು ವರ್ಷದ ಹುಟ್ಟುಹಬ್ಬವನ್ನು ಈ ವರ್ಷ ಆಚರಿಸು ತ್ತಿದ್ದೇವೆ. ವರ್ಷಪೂರ್ತಿ ಹಲವಾರು ಊರುಗಳಲ್ಲಿ ಸಮಾರಂಭಗಳ ಏರ್ಪಾಡು. ನಾಡು ನುಡಿಯ ಸೇವೆ ಸಲ್ಲಿಸಿದ ಬಿ. ಎಂ. ಶ್ರೀಯವರನ್ನು ನೆನಪಿಸಿಕೊಳ್ಳುವೆವು" ಎಂದು ಹೇಳಿದರು.

ಬಿ. ಎಂ. ಶ್ರೀಯವರ ಜೀವನ ಚರಿತ್ರೆ, ಬರೆದ ಸಾಹಿತ್ಯ ವಿಚಾರ ತಿಳಿಯಬೇಕೆಂಬ ಆಸೆ. ಅದಕ್ಕಾಗಿ ಈ ಕಾಗದ. ಅಪ್ಪಾಜಿ, ನೀವು ಸಾಹಿತ್ಯಪ್ರೇಮಿಗಳು. ಮನೆಯಲ್ಲಿ ಯಾವಾಗಲೂ

ಸಾಹಿತಿಗಳ ಬಗ್ಗೆ ಹೇಳುತ್ತಿರುತ್ತೀರಿ. ನಾನೂ ಕೇಳುತ್ತಿದ್ದೆ. ಪೂರ್ತಿಯಾಗಿ ಗೊತ್ತಾಗುತ್ತಿರಲಿಲ್ಲ. ಈ ದಿನ ಅತಿಥಿಗಳು ಈ ಹಾಡನ್ನು ಹೇಳಿ ಬಿ. ಎಂ. ಶ್ರೀಯವರ ಪರಿಚಯ ಮಾಡಿಕೊಟ್ಟರು. ಅವರ ಬಗ್ಗೆ ಪೂರ್ಣ ತಿಳಿಯುವ ಆಸೆ.

"ಶ್ರೀಯವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ. ನಾಟಕ, ಕವಿತೆ, ವಿಮರ್ಶೆ, ಸಾಹಿತ್ಯ ರಚಿಸಿದ್ದಾರೆ" ಅಂತ ತಿಳಿಯಿತು. ಅಪ್ಪಾಜಿ, ಈ ವಿಚಾರದಲ್ಲಿ ಯಾವ ಪುಸ್ತಕಗಳನ್ನು ಓದಬೇಕು ತಿಳಿಸಿ. ನಿಮ್ಮ ಹಾಗೆ ನನಗೂ ಸಾಹಿತಿಗಳ ಬಗ್ಗೆ ತಿಳಿಯುವ ಆಸೆ. ಪುಸ್ತಕದ ಹೆಸರು ಬರೆದರೆ ಗ್ರಂಥ ಭಂಡಾರದಲ್ಲಿ ತೆಗೆದುಕೊಂಡು ಓದುತ್ತೇನೆ. ನಿಮಗೆ ತಿಳಿದಿರುವ ವಿಚಾರವನ್ನಾದರೂ ನನಗೆ ತಿಳಿಸಿ. ಏನೋ ಬರೆದೆ ಅಂತ ತಿಳಿಯಬೇಡಿ. ಅಮ್ಮ ಚೆನ್ನಾಗಿದ್ದಾರಾ ? ನನ್ನ ನಮಸ್ಕಾರ ತಿಳಿಸಿ. ಇಲ್ಲಿ ಚಿಕ್ಕಪ್ಪ, ಚಿಕ್ಕಮ್ಮ ಚೆನ್ನಾಗಿದ್ದಾರೆ.

ನಿಮ್ಮ ಪ್ರೀತಿಯ ಮಗಳು,
ಶಶಿ

ಪತ್ರ—2

ದಿನಾಂಕ 4, ನವೆಂಬರ್
ಮೈಸೂರು

ಪ್ರೀತಿಯ ಶಶಿ,

ನಿನ್ನ ಕಾಗದ ತಲುಪಿತು, ಆನಂದವಾಯಿತು. ಸಾಹಿತಿಗಳ ಬಗ್ಗೆ ನಿನಗೆ ಎಷ್ಟು ಗೌರವ! ಸಾಹಿತ್ಯದ ಬಗ್ಗೆ ಅದೆಷ್ಟು ಆಸಕ್ತಿ!

ನಿನ್ನ ಕಾಗದ ನೋಡಿ ನನಗಾದ ಸಂತೋಷ ಹೇಳತೀರದು. ಶ್ರೀ ಎಂ. ವಿ. ಸೀತಾರಾಮಯ್ಯನವರು ಹಿರಿಯ ಸಾಹಿತಿಗಳು. ಅವರು ನಿಮ್ಮ ಶಾಲೆಗೆ ಬಂದ ವಿಚಾರ ಬರೆದಿದ್ದೀಯ. ನಿಜಕ್ಕೂ ಅವರು ನಿನ್ನಲ್ಲಿ ಒಳ್ಳೆಯ ಆಸೆಯನ್ನು ಹುಟ್ಟಿಸಿದ್ದಾರೆ. ಬಿ. ಎಂ. ಶ್ರೀಯವರನ್ನ ನಾನು ನೋಡಿದ್ದೆ. ಅವರ ಭಾಷಣ ಕೇಳಿದ್ದೆ. ದುಂಡು ದುಂಡಾದ, ಅಷ್ಟೇನೂ ಎತ್ತರವಲ್ಲದ, ಅಂದವಾದ ಮೈಕಟ್ಟು. ಅಗಲವಾದ, ನಸುಗೆಂಪಿನ, ಗಂಭೀರ ವಾದ ಹಣೆ, ಲವಲವಿಕೆಯ ಕಣ್ಣು. ಸದಾ ನಗುಮುಖ. ಮುಖಕ್ಕೆ ಮುದ್ದಾಗಿ ಹೊಂದಿಕೊಂಡ ಮೂಗು, ಕಾಂತಿಯಿಂದ ಕೂಡಿದ ಕಣ್ಣುಗಳು. ಒಮ್ಮೆ ಅವರನ್ನ ನೋಡಿದರೆ ಸಾಕು, ಮನಸ್ಸಿನ ಮೇಲೆ ಪ್ರಭಾವ ಬೀರುವ ವ್ಯಕ್ತಿತ್ವ ಇವರದು. ಜರತಾರಿ ಅಂಚಿನ ರುಮಾಲು, ಅಂದವಾದ ಕೋಟು, ಅಷ್ಟೇ ಅಂದವಾದ ಸುಂದರವಾದ ಮಾತು. ಅವರ ಭಾಷಣ ಕೇಳುವುದೇ ಆನಂದ. ಶ್ರೀಯವರ ಪುಸ್ತಕಗಳನ್ನು ಓದಿ ಅರ್ಥಮಾಡಿ ಕೊಳ್ಳಲು ನಿನಗೆ ಶಕ್ತಿ ಸಾಲದು. ನಾನೇ ಬರೆದು ತಿಳಿಸುತ್ತೇನೆ. ನೀನು ದೊಡ್ಡವಳಾದ ಮೇಲೆ ಅವರ ಪುಸ್ತಕಗಳನ್ನು ಓದುವಿ ಯಂತೆ.

ಬಿ. ಎಂ. ಶ್ರೀಯವರು ನಮ್ಮ ನಾಡಿನ ಹಿರಿಯ ಸಾಹಿತಿ ಹಾಗೂ ಕವಿ. ಇವರು ಕನ್ನಡದ ಕಣ್ವರು. 'ಇಂಗ್ಲಿಷ್ ಗೀತಗಳು' ಅವರ ಕವನ ಸಂಕಲನ. ಇಂಗ್ಲಿಷ್ ಭಾಷೆಯಲ್ಲಿನ ಒಳ್ಳೆಯ ಕವನಗಳ ಭಾಷಾಂತರ. ಕನ್ನಡ ಭಾಷೆಯ ಬೆಳವಣಿಗೆಗೆ ಇಟ್ಟ ಮೊದಲ ಹೆಜ್ಜೆ. ಬೇರೆ ಭಾಷೆಯ ಸಾಹಿತ್ಯದಿಂದ ಒಳ್ಳೆಯ ಅಂಶಗಳನ್ನು ಕನ್ನಡಕ್ಕೆ ತಂದರು. 'ಇಂಗ್ಲಿಷ್ ಗೀತಗಳು' ಶ್ರೀಯವರ ಮೊದಲ ಕವನ ಸಂಗ್ರಹ.

ಇದರಲ್ಲಿ ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಸ್ಕಾಟ್, ಟೆನಿಸನ್, ಬರ್ನ್ಸ್, ಕೋಲರಿಜ್, ಬೈರನ್, ಷೆಲ್ಲಿ, ಬ್ರೌನಿಂಗ್, ಮೊದಲಾದ ಕವಿಗಳ ಕವನಗಳನ್ನು ಅನುವಾದಿಸಿ, 'ಇಂಗ್ಲಿಷ್ ಗೀತಗಳು' ಎಂಬ ಹೆಸರಿನಲ್ಲಿ ಹೊರತಂದರು. ಈ ಪುಸ್ತಕ ಪ್ರಕಟನೆಯಿಂದ ಸಾಹಿತ್ಯದ ಹೊಸ ಬಾಗಿಲು ತೆರೆಯಿತು. ಕನ್ನಡ ಪದ್ಯ ಒಂದು ಹೊಸ ರೂಪ ತಾಳಿತು. ಶ್ರೀಯವರಿಗೆ ಯಾವಾಗಲೂ ಕನ್ನಡದ ಚಿಂತೆ. ಇಂಗ್ಲಿಷ್ ಸಾಹಿತ್ಯವನ್ನು ಅವರು ಓದಿ ಆಳವಾಗಿ ತಿಳಿದುಕೊಂಡಿದ್ದರು. ಆ ಭಾಷೆಯ ಸಂಪತ್ತು, ಸಮೃದ್ಧತೆ ಕಂಡಿದ್ದರು. ಆ ಸಂಪತ್ತು ಕನ್ನಡದಲ್ಲಿ ಬರುವುದು ಹೇಗೆ ? ಇಂಗ್ಲಿಷ್ ಸಂಪರ್ಕದಿಂದ ಕನ್ನಡ ಸಾಹಿತ್ಯ ವನ್ನು ಕಸಿಮಾಡಿ ಬೆಳೆಸುವುದು ಹೇಗೆ ? ಎಂಬುದೇ ಆಲೋಚನೆ. ಗದ್ಯದ ಬೆಳವಣಿಗೆ ಹೇಗಾಗಬೇಕು ಎಂಬ ಬಗೆಗೆ ಸೂಚನೆ ನೀಡುತ್ತಿದ್ದರು. ಇವೆಲ್ಲದರ ಮೊದಲ ಫಲ 'ಇಂಗ್ಲಿಷ್ ಗೀತ'ಗಳು. ಇದು ಕನ್ನಡ ಹೊಸಕವಿತೆಗೆ ಮೇಲ್ಪಂಕ್ತಿಯಾಯಿತು.

ಶ್ರೀಯವರು ಕೆಲವು ಸ್ವಂತ ಕವನಗಳನ್ನೂ ರಚಿಸಿದರು. ಅವುಗಳ ಸಂಕಲನವೆ 'ಹೊಂಗನಸು'ಗಳು, ಇದರಲ್ಲಿ ಬರುವ 'ಶುಕ್ರಗೀತೆ' ಒಂದು ಕವನ. ಸತ್ಯದಲ್ಲಿ, ಧರ್ಮದಲ್ಲಿ ಅವರಿಗೆ ಎಷ್ಟು ಶ್ರದ್ಧೆಯಿತ್ತೆಂಬುದು ಅದರಲ್ಲಿ ತಿಳಿಯುವುದು, ಗೊತ್ತೆ ? ಅದರಿಂದ ಕಣ್ಣಿಗೆ ಬೆಳಕಾಗಿ, ಹೃದಯಕ್ಕೆ ಧೈರ್ಯ ಬರುತ್ತದೆ, ಬಾಳನ್ನು ಧರ್ಮದ ದಾರಿಯಲ್ಲಿ ನಡೆಸುವ ಸ್ಫೂರ್ತಿ ದೊರೆಯು ತ್ತದೆ.

ಕನ್ನಡಿಗರಿಗೆ ಬಿ. ಎಂ. ಶ್ರೀಯವರ ನೆನಪು ಬತ್ತಿಹೋಗದ ನೀರಿನ ಚಿಲುಮೆ. ಶಕ್ತಿಯ ಮೂಲ ಸ್ಥಾನ.

"ಋತವೊಂದೆ ಗೆಲ್ಲುವುದು, ಅನೃತವಲ್ತು ;
ಅಮೃತವೆನೆ ವಿದ್ಯೆಯೆ ; ಅವಿದ್ಯೆಯಲ್ತು ;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು"

ಇದು ಶ್ರೀಯುವರ ಸಂದೇಶ, ಜೀವನದ ಧ್ಯೇಯ. ಕನ್ನಡವು ಗೆಲ್ಲಲಿ, ಕನ್ನಡ ಬಾಳಲಿ. ಕನ್ನಡದ ಮೂಲಕ ಲೋಕದ ಮಹಾ ಸತ್ವಗಳು ಬೆಳೆಯಲಿ ಎಂದಿದ್ದಾರೆ.

ಶ್ರೀಯುವರ ನಾಡ ಪ್ರೇಮದ ವೈಖರಿಯನ್ನು ಅವರ ಕವನಗಳಿಂದಲೇ ತಿಳಿಯಬಹುದು.

'ಹಿರಿಯರಿರ, ಕಿರಿಯರಿರ, ಅಕ್ಕತಂಗಿಯರಿರಾ,
ಅಣ್ಣತಮ್ಮದಿರಾ,
ಒಸಗೆನುಡಿ ತಂದಿಹೆನು ನಾನೊಂದ, ತಾಯಿಂದ,
ಸಿರಿಯ ತಾಯಿಂದ–
ಕೇಳುವಿರ ಕಿವಿಗೊಟ್ಟು, ತಾಳುವಿರ ಎದೆನೆಟ್ಟು, ತಾಳಿ
ಬಾಳುವಿರಾ ?
ಕಣ್ಣಾರೆ ಕಂಡೆನವಳನು-ಕಂಡು, ತಂದಿಹೆನು, ಕೇಳಿ.
ಅವಳೆನ್ನೊಳಾಡಿದುದನಾಡುವೆನು ನಿಮ್ಮಲ್ಲಿ ಕೇಳಿ

ಕಿವಿಗೊಟ್ಟು ಕೇಳಿ ;
ಎದೆಗೊಟ್ಟು ಕೇಳಿ ;
ಏಳಿ ಎಚ್ಚರವಾಗಿ, ಅರಳಿ ಬಾಳಿ.'

ಮತ್ತೊಂದು ಘಟನೆ. ಶ್ರೀಯುವರು, ಶ್ರೀರಾಮಕೃಷ್ಣ ಪರಮಹಂಸರಂತೆ ಸಾಧಕರು, ತಪಸ್ವಿಗಳು. ಪರಮಹಂಸರು

ದೇವರೊಡನೆ ಮಾತನಾಡುವ ಹಠ ಸಾಧಿಸಿದರು. ಹಾಗೇ ಶ್ರೀಯುವರು ಕನ್ನಡ ತಾಯಿಯನ್ನು ಕಂಡರು. ಅವರು ಮಾತನಾಡಿಸಿದುದು ಕಲ್ಲಿನ ಮೂರ್ತಿಯನ್ನಲ್ಲ, ಇಡೀ ನಾಡನ್ನು. ಮಂಗಳೂರು, ಕಾರವಾರದ ಕಡಲ ಕರೆಯಲ್ಲಿ ನಿಂತರು. ಕನ್ನಡ ದೇವಿಯ ಧ್ವನಿಯನ್ನ ಆಲಿಸಿದರು. ಸಹ್ಯಾದ್ರಿಯ ಮೇಲೆ ನಿಂತರು. ಆಕೆಯ ಸುಯಿಲನ್ನು ಕೇಳಿದರು. ಹಾಳು ಹಂಪೆಯ ಪ್ರದೇಶದಲ್ಲಿ ಶೋಕಿಸಿದರು. ಕನ್ನಡನಾಡಿನ ಊರೂರಿನಲ್ಲೂ ನಾಡದೇವಿ ಹಾಗೂ ನುಡಿದೇವಿಯನ್ನು ಗುರುತಿಸಿದರು. ಆಕೆಯ ದುಃಸಿತಿಯನ್ನು ಕಂಡು ಕಣ್ಣೀರಿಟ್ಟರು.

"ಕನ್ನಡ ತಾಯಿಯನ್ನು ಕಂಡಿದ್ದೀರಾ ?" ಈ ಪ್ರಶ್ನೆಗೆ ಅವರ ಉತ್ತರ :

"ಕನ್ನಡ ನಾಡ ದೇವಿಯನ್ನು ಕಂಡಿದ್ದೇನೆ. ಆಕೆ ಹಳೆಯ ಮುತ್ತೈದೆ. ಅವಳ ದಿವ್ಯರಥವನ್ನು ಸಿಂಗರಿಸೋಣ. ಮುಂದಕ್ಕೆ ಎಳೆಯುವ ಕೆಲಸವನ್ನು ನಾವೆಲ್ಲ ಮಾಡಬೇಕಾಗಿದೆ. ಬನ್ನಿ, ಒಕ್ಕೊರಲಿನಿಂದ ಕೂಗಿ. ಎಲ್ಲರೂ ಒಂದಾಗಿ ರಥವನ್ನು ಎಳೆಯೋಣ ಬನ್ನಿ."

ಇದಕ್ಕಿಂತ ಚೆನ್ನಾಗಿ ನಾಡ ಪ್ರೇಮವನ್ನು ಬೇರೆ ಯಾರೂ ವರ್ಣಿಸಿರಲಾರರು.

ಕನ್ನಡದಲ್ಲಿ ಯೋಚಿಸುವುದು ಹೀನ ಎಂಬ ಭಾವನೆ ಇದ್ದ ಕಾಲ. ಕನ್ನಡದಲ್ಲಿ ಬರೆಯುವುದು, ಮಾತನಾಡುವುದು, ಕೇಳು ವಂತೆಯೇ ಇಲ್ಲ. ಆಗ ಕನ್ನಡ ಜನಜೀವನದ ನಾಡಿಯು ಮಿಡಿತ

ವನ್ನು ಅವರು ಗುರುತಿಸಿದರು. ತಮ್ಮ ಜೀವನವನ್ನು ಅದರಲ್ಲಿ ಮಿಳಿತವಾಗುವಂತೆ ಮಾಡಿದರು. ಕನ್ನಡದಲ್ಲಿ ಯೋಚಿಸಿದರು. ಕನ್ನಡದಲ್ಲಿ ಮಾತನಾಡಿದರು, ಕನ್ನಡದಲ್ಲಿ ಬರೆದರು. ಹೊಸ ಸಂಪ್ರದಾಯದ ಮೊದಲಿಗರಾದರು. "ನಮ್ಮ ಬದುಕು ಕನ್ನಡದಿಂದ, ನಮ್ಮ ಮೇಲ್ಮೆ ಕನ್ನಡದಿಂದ, ನಮ್ಮ ಮೋಕ್ಷ ಕನ್ನಡದಿಂದ" ಎಂಬುದನ್ನು ಕಂಡುಕೊಂಡರು. ಕನ್ನಡಿಗರಿಗೆ ಹಾದಿ ಮಾಡಿಕೊಟ್ಟ ಮಹಾಪುರುಷ ಅವರು.

ಶ್ರೀ ಅವರದು ವಿಶಾಲದೃಷ್ಟಿ. ಕನ್ನಡದಿಂದ ಭಾರತ, ಭಾರತದಿಂದ ವಿಶ್ವ. ಇದು ಅವರ ದೃಷ್ಟಿ. ಹೀಗೆ ಅವರ ಸಾಹಿತ್ಯ ಸೃಷ್ಟಿ. ಶ್ರೀಯವರು ಬರೆಯಲೇಬೇಕೆಂಬುದನ್ನು ಮನಸ್ಸಿನಲ್ಲಿ ರಚಿಸಿಕೊಳ್ಳುತ್ತಿದ್ದರು. ಅವರ ಬರವಣಿಗೆ ಕವಿತೆಗೆ ಮಾತ್ರ ಮೀಸಲಿರಲಿಲ್ಲ. ಅವರ ದೃಷ್ಟಿ ನಾಟಕಗಳ ಕಡೆಗೂ ಹರಿಯಿತು. ಕನ್ನಡದಲ್ಲಿ ಚಿಕ್ಕದೇವರಾಯರ ಕಾಲದವರೆಗೆ ಒಂದು ನಾಟಕವೂ ಇರಲಿಲ್ಲ. ಈ ಕೊರತೆಯನ್ನು ಪರಿಹರಿಸಲು ಯೋಚಿಸಿದರು. ರನ್ನ, ಕನ್ನಡ ಸಾಹಿತ್ಯದ ಮಹಾಕವಿ–"ಸಾಹಸ ಭೀಮ ವಿಜಯ" ಈತನ ಗ್ರಂಥ. ಇದನ್ನು ಓದಿದಾಗ ಈ ಯೋಚನೆ ಹೆಚ್ಚಾಯಿತು. ರನ್ನನ ಕಾವ್ಯದಲ್ಲಿ ನಾಟಕದ ಲಕ್ಷಣಗಳು ಇದ್ದವು. ಶ್ರೀಯವರು ಅಲ್ಲಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಅದನ್ನು ನಾಟಕಕ್ಕೆ ಬಳಸಿಕೊಂಡರು.

ಮಹಾಭಾರತದ ಕಥೆಯನ್ನು ನೀನು ಆಗಲೇ ಓದಿದ್ದೀಯ. ಆದರೂ ಜ್ಞಾಪಿಸುತ್ತೇನೆ. ಕೌರವರು ಮತ್ತು ಪಾಂಡವರಿಗೆ ನಡೆದ ಯುದ್ಧ. ಸುಮಾರು ಹದಿನೆಂಟು ದಿನಗಳು ನಡೆದಿದೆ. ಕೊನೆಯ

ದಿನದ ಯುದ್ಧದ ವೇಳೆಗೆ ಕೌರವನ ಕಡೆಯುವರು ಎಲ್ಲರೂ ಸತ್ತಿದ್ದಾರೆ. ದುರ್ಯೋಧನ ತಲೆ ಮರೆಸಿಕೊಂಡಿದ್ದಾನೆ, ವೈಶಂಪಾಯನ ಸರೋವರದಲ್ಲಿ. ಪಾಂಡವರು ಇದನ್ನು ಹೇಗೋ ತಿಳಿದಿದ್ದಾರೆ. ಕೃಷ್ಣನೊಡನೆ ಸರೋವರದ ಸಮೀಪಕ್ಕೆ ಬಂದು ದುರ್ಯೋಧನನನ್ನು ಬಾಯಿಗೆ ಬಂದಂತೆ ಮೂದಲಿಸಿದ್ದಾರೆ. ಮೂದಲಿಕೆ ತಾಳದೆ ದುರ್ಯೋಧನ ಹೊರಗೆ ಬಂದಿದ್ದಾನೆ ಭೀಮನೊಡನೆ ವೀರಾವೇಶದಿಂದ ಗದಾಯುದ್ಧ ಮಾಡಿ ಸಾಯುತ್ತಾನೆ.

ಶ್ರೀಯವರ 'ಗದಾಯುದ್ಧ' ನಾಟಕದ ನಾಯಕ ದುರ್ಯೋಧನ, ನಾಟಕದ ಕೊನೆಯಲ್ಲಿ ದುರ್ಯೋಧನನ ಸಾವು. 'ಗದಾಯುದ್ಧ' ನಾಟಕದ ಮಾರ್ಪಾಡು ಕನ್ನಡಕ್ಕೆ ಹೊಸದು. ಕನ್ನಡ ನಾಟಕ ಪ್ರಪಂಚಕ್ಕೂ ಹೊಸದು. ಕಾರಣ, ನಾಟಕದ ಅಂತ್ಯ ದುಃಖಮಯ. ದುರಂತ ನಾಟಕದ ನಾಯಕನಿಗೆ ದುರಂತ ಸಾವಿನಲ್ಲಿ ಕೊನೆ. ಇಂಥ ದುರಂತ ನಾಟಕಗಳು ಕನ್ನಡ ನಾಟಕ ಪ್ರಪಂಚಕ್ಕೆ ಬರಬೇಕೆಂದು ತೋರಿಸಿದರು. ಕನ್ನಡ ರುದ್ರನಾಟಕಗಳಿಗೆ ಮಾರ್ಗದರ್ಶಕರಾದರು.

ರುದ್ರನಾಟಕದ ಕಲ್ಪನೆ ಶ್ರೀಯವರಿಗೆ ಗ್ರೀಕ್ ನಾಟಕದಿಂದ, ಷೇಕ್ಸ್‌ಪಿಯರ್‌ನಿಂದ ಬಂತು. ಷೇಕ್ಸ್‌ಪಿಯರ್ ಕೇವಲ ಮಹಾಕವಿ ಮಾತ್ರವಲ್ಲ, ಆಂಗ್ಲ ಸಾಹಿತಿ, ನಾಟಕ ಸಾರ್ವಭೌಮ. ಈತನ ನಾಟಕಗಳನ್ನು ಓದಿದರು. ರುದ್ರನಾಟಕದ ಬಗ್ಗೆ ಒಲವು ಮೂಡಿತು. ಷೇಕ್ಸ್‌ಪಿಯರ್ ಸುಖಾಂತ ನಾಟಕದ ಜೊತೆಗೆ ರುದ್ರನಾಟಕವನ್ನೂ ಬರೆದಿದ್ದಾನೆ. ಈ ಮಹಾಕವಿಯ ಪರಿಚಯ ನೀನು ಕಾಲೇಜಿಗೆ ಹೋದಾಗ ಆಗುತ್ತೆ.

ಆಂಗ್ಲ ಸಾಹಿತ್ಯದ ಜೊತೆಗೆ ಗ್ರೀಕ್ ಸಾಹಿತ್ಯವನ್ನೂ ಶ್ರೀಯುವರು ಓದಿದರು. ಗ್ರೀಕ್ ಸಾಹಿತ್ಯದಲ್ಲಿ ನಾಟಕಗಳು ಬಹು ಪ್ರಸಿದ್ಧ. ಅವುಗಳೆಲ್ಲ ದುರಂತ ನಾಟಕಗಳೇ. ಇವು ಅವರ ಮನಸ್ಸಿಗೆ ಬಹಳ ಹಿಡಿಸಿದವು. ಅವುಗಳಲ್ಲಿ 'ಏಜಾಕ್ಸ್' ಒಂದು. ಇದನ್ನು ಬರೆದ ಮಹಾಕವಿ 'ಸಾಫೊಕ್ಲಿಸ್'. ಈತ ಗ್ರೀಕ್ ನಾಟಕ ಸಾಹಿತ್ಯದಲ್ಲಿ ಪ್ರತಿಭಾವಂತ ನಾಟಕಕಾರ. 'ಏಜಾಕ್ಸ್' ಕನ್ನಡಕ್ಕೆ ತರುವ ಆಸೆ ಶ್ರೀಯುವರದು. ಮಹಾಭಾರತದ ಕಥೆಯನ್ನ ಹೋಲಿಸಿ ನೋಡಿದರು. ಹೊಂದಿಕೊಂಡಂತೆ ಕಂಡು ಬಂತು. ಇದು ಕನ್ನಡದಲ್ಲಿ 'ಅಶ್ವತ್ಥಾಮನ್' ಎಂಬುದಾಗಿ ಪ್ರಕಟಗೊಂಡಿತು.

ಗ್ರೀಕ್ ದೇಶದಲ್ಲಿಯೂ ಪುರಾಣಪ್ರಸಿದ್ಧವಾದ ಕಥೆಗಳಿವೆ. ನಮ್ಮ ದೇಶದ ಪುರಾಣ ಕಾವ್ಯಗಳಿಗೆ ತಕ್ಕಮಟ್ಟಿಗೆ ಹೊಂದಾಣಿಕೆಯಿದೆ. ಇದರಿಂದಲೇ 'ಏಜಾಕ್ಸ್' ಎಂಬ ಗ್ರೀಕ್‌ಪುರಾಣ ಪುರುಷನನ್ನು ಅಶ್ವತ್ಥಾಮನಿಗೆ ಹೋಲಿಸುವುದು ಸಾಧ್ಯವಾಯಿತು. ಮಹಾಭಾರತದ ದ್ರೋಣ, ಅಶ್ವತ್ಥಾಮರು ಕನ್ನಡ ನಾಡಿನ ಬನವಾಸಿಯವರಾದರು, ದ್ರೋಣರ ತಾಯಿ ಭಾರ್ಗವಿ ಪರಶುರಾಮನ ತಂಗಿ. ಏಕಲವ್ಯ ಬೇಡರ ಪಡೆಯ ಒಡೆಯ. ಈತ ಭಾರತ ಯುದ್ಧದಲ್ಲಿ ಕಾದಿದ. ಈ ರುದ್ರನಾಟಕ ಏಜಾಕ್ಸ್ ನಾಟಕವನ್ನು ಅನುಸರಿಸಿದ್ದರೂ ಕನ್ನಡನಾಡಿನದೋ ಅನ್ನುವಷ್ಟರಮಟ್ಟಿಗೆ ಪರಿಣಮಿಸಿದೆ.

ದುರ್ಯೋಧನ ಕುರುಕುಲ ಸಾರ್ವಭೌಮ. ಕುರುಕ್ಷೇತ್ರ ಯುದ್ಧದಲ್ಲಿ ತೊಡೆ ಮುರಿದಿದೆ. ಹೊರಳಾಡುತ್ತಿದ್ದಾನೆ. ಅವನ ದುರವಸ್ಥೆಯನ್ನು ಕಂಡು ಅಶ್ವತ್ಥಾಮ ಮರುಗಿದ್ದಾನೆ. ಆಗ

ಪಾಂಡವರನ್ನು ಸಂಹರಿಸುವ ಪ್ರತಿಜ್ಞೆಮಾಡಿ ಹೊರಟ ಅಶ್ವತ್ಥಾಮ. ತನ್ನ ದೈವ ರುದ್ರನನ್ನು ಪ್ರಾರ್ಥಿಸಿದ. ವರ ಕರುಣಿಸೆಂದು ಬೇಡಿದ. ರುದ್ರ ವರ ಕರುಣಿಸಲಿಲ್ಲ. ಅಶ್ವತ್ಥಾಮ ರುದ್ರನನ್ನ ಧಿಕ್ಕರಿಸಿ ಬುದ್ಧಿಗೇಡಿಯಾದ. ರಾತ್ರೋರಾತ್ರಿ ಪಾಂಡವರ ಪಾಳೆಯವನ್ನು ಹೊಕ್ಕ. ಕೈಗೆ ಸಿಕ್ಕಿದವರನ್ನು ಕೊಂದ. ಒಂದು ಕುರಿಯನ್ನು ಕೃಷ್ಣನೆಂದು ಹಿಡಿದು ಹಿಂಸಿಸಿದ. ಪಶುಗಳನ್ನು ಸೆರೆಹಿಡಿದು ಪಾಂಡವರೆಂದು ಗೋಳಾಡಿಸಿದ. ಅನಂತರ ಅಶ್ವತ್ಥಾಮನಿಗೆ ತಿಳಿವಳಿಕೆ ಬಂತು. ತನ್ನ ತಪ್ಪಿನ ಅರಿವಾಯಿತು. ಭೂಮಿಯ ಮೇಲೆ ನನ್ನಂತಹವನು ಇರಬಾರ ದೆಂದು ಆತ್ಮಹತ್ಯೆ ಮಾಡಿಕೊಂಡ. ಇದು ನಾಟಕದ ಕಥೆ.

'ಅಶ್ವತ್ಥಾಮನ್' ನಾಟಕ ಕೋಲಾಹಲವನ್ನುಂಟು ಮಾಡಿತು. ಕಾರಣ, ಅಶ್ವತ್ಥಾಮ ಚಿರಂಜೀವಿ; ಶ್ರೀಯವರು ತಮ್ಮ ನಾಟಕದಲ್ಲಿ ಅವನು ಸಾಯುವಂತೆ ಮಾಡಿದ್ದರು. ಅದರಲ್ಲೂ ಕನ್ನಡನಾಡಿನ ಕಣ್ಣಾದ ಬನವಾಸಿಯನ್ನು ಸ್ಮರಿಸುತ್ತಾ ಪ್ರಾಣಬಿಡುವನು. ಹೀಗೆ ಶ್ರೀಯವರು ಕಾವ್ಯ ಮತ್ತು ಪುರಾಣ ಗಳಲ್ಲಿಯ ಪಾತ್ರಗಳನ್ನ ಆರಿಸಿಕೊಂಡರು. ತಮಗೆ ಬೇಕಾದ ಮಾರ್ಪಾಡು ಮಾಡಿಕೊಂಡರು. 'ದುರಂತ' ಎಂಬ ಪ್ರಕಾರ ನಮ್ಮಲ್ಲಿ ಬಳಕೆಗೆ ಬಂದಿಲ್ಲ. ಆ ಪ್ರಕಾರದ ಗುಣವನ್ನು ನಮ್ಮವರಿಗೆ ತಿಳಿಸಿದರು. ಒಪ್ಪುವುದು, ಬಿಡುವುದು ಜನಕ್ಕೆ, ಕಾಲಕ್ಕೆ ಸೇರಿದ್ದು. ಕೇವಲ ಧರ್ಮ ಅಥವಾ ನೀತಿಬೋಧನೆಗೆ ತೊಡಗಿ ದುಷ್ಟ ಶಿಕ್ಷೆಯಾಗಬೇಕು ಅನ್ನುವುದಕ್ಕಿಂತ, ಧರ್ಮ, ವಿಧಿ, ದೈವ, ಇವುಗಳ ವಿಚಾರದಲ್ಲಿ ಭಕ್ತಿಭಾವ ಮೂಡಿಸ ಬೇಕೆಂದರು. "ಅಯ್ಯೋ ಪಾಪ ಹೀಗಾಯಿತಲ್ಲ! ಆಗದಿದ್ದರೆ

ಚೆನ್ನಾಗಿತ್ತು"-ಈ ಭಾವ ಮೂಡಿಸುವ ಉದ್ದೇಶ ಶ್ರೀಯುವರದು. ಅಂತಹ ಪಾತ್ರಗಳಿಗೆ ಕರ್ಣನನ್ನ ಉದಾಹರಿಸಿದರು.

ಶ್ರೀಯುವರ ಮತ್ತೊಂದು ನಾಟಕ 'ಪಾರಸಿಕರು.' ಇದು ಗ್ರೀಕಿನ ಮತ್ತೊಂದು ನಾಟಕ, ಐತಿಹಾಸಿಕ ರುದ್ರನಾಟಕ. ಶ್ರೀಯುವರು ಇದನ್ನು ಅನುವಾದಿಸಿ ಕನ್ನಡದಲ್ಲಿಯೂ ಐತಿಹಾಸಿಕ ರುದ್ರನಾಟಕವನ್ನು ತಂದರು. ಈಸ್ಕಿಲಸ್ ಗ್ರೀಕ್ ಮಹಾಕವಿ. ತಮ್ಮ ನಾಟಕಕ್ಕೆ ಗ್ರೀಕ್ ಚರಿತ್ರೆಯಿಂದ ಪಾತ್ರ ಆರಿಸಿದ್ದಾರೆ. ಇದೇ ಈ ನಾಟಕದ ವಿಶೇಷತೆ. ಕ್ಷಯಾರ್ಷ ಪರ್ಷಿಯಾದ ಚಕ್ರವರ್ತಿ. ಗ್ರೀಕ್ ಚಕ್ರಾಧಿಪತ್ಯದ ಮೇಲೆ ದಂಡೆತ್ತಿಹೋದ. ಕ್ಷಯಾರ್ಷ ಮತ್ತು ಆತನ ಸೈನ್ಯ ಸಂಪೂರ್ಣ ಸೋಲನ್ನು ಪಡೆಯಿತು. ಪರ್ಷಿಯಾ ಚಕ್ರಾಧಿಪತ್ಯ ನಾಶವಾಯಿತು, ಆ ದುಃಖವೇ 'ಪಾರಸಿಕರು' ನಾಟಕದ ಕಥಾವಸ್ತು.

ಶ್ರೀಯುವರಿಗೆ ನಾಡಿನ ಪ್ರೇಮ ಅಪಾರ. ನಮ್ಮ ನಾಡಿನ ಇತಿಹಾಸದ ಹಿರಿಮೆಯನ್ನು ಓದಿ ಸಂತೋಷಪಟ್ಟವರು. ಇದು ನಾಡಿನವರಿಗೆ ತಿಳಿಸುವ ಸಂಕಲ್ಪ. ನಾಡಿನ ಚರಿತ್ರೆ ಮುಖ್ಯ. ಅದು ಜನರಿಗೆ ತಿಳಿಯದಿದ್ದರೆ ಹೇಗೆ? ಇದನ್ನು ಮನಗಂಡರು. ನಾಡಿನ ಪ್ರಸಿದ್ಧ ವಿದ್ವಾಂಸರನ್ನ ಕಲೆ ಹಾಕಿದರು. 'ಕನ್ನಡ ನಾಡಿನ ಸಾಹಿತ್ಯ ಚರಿತ್ರೆ' ಎಂಬ ಗ್ರಂಥ ಬರೆಯಿಸಿ ಪ್ರಕಟಿಸಿದರು.

ಕನ್ನಡದ ಶಾಸನ ಸಂಪತ್ತು ಕ್ರಿ.ಶ. 7ನೇ ಶತಮಾನದಲ್ಲಿ ಆರಂಭ. ಅಲ್ಲಿಂದ ತೊಡಗಿ ಕನ್ನಡ ಕವಿಗಳನ್ನು, ಅವರ ಕಾವ್ಯ ಗಳನ್ನು ಒಂದೆಡೆ ಸೇರಿಸುವ ಯೋಜನೆ. ಈ ಕಾರ್ಯ ಪ್ರಾರಂಭಿ ಸಿದರು. 7ನೆಯ ಶತಮಾನದ ಶಾಸನಗಳು, ಪೂರ್ವ ಸಾಹಿತ್ಯ,

ನಾಡಪದಗಳು, ಹೊಸ ಕವಿತೆ, ಎಲ್ಲವನ್ನೂ ಸೇರಿಸಿ 'ಕನ್ನಡ ಬಾವುಟ' ಎಂಬ ಹೊತ್ತಿಗೆ ತಂದರು. ಎಲ್ಲ ಕನ್ನಡಿಗರು ಒಂದುಗೂಡಿದ ಕಲ್ಪನೆ 'ಕನ್ನಡ ಬಾವುಟ'. ಕನ್ನಡ ಕವಿತೆಗೆ ಹೊಸ ಮೆರುಗು ನೀಡಿದ ಮಹಾನುಭಾವರಿವರು. ಇವರ ಎಲ್ಲ ಕವಿತೆಗಳ ನಿರ್ಮಾಣದಲ್ಲಿ ಪದರಚನೆ ಹಾಗೂ ಛಂದೋರಚನೆ ಸುಂದರ. ಮೊದಲು ಸ್ಫುಟವಾಗಿ ನುಡಿದು ಆನಂದಿಸುವರು. ಮೂಕವಾಗಿ ತನ್ನಷ್ಟಕ್ಕೆ ಓದುವುದು ಕಾವ್ಯಕೃತಿಗೆ ಅಪಚಾರವೆಂದರು 'ಶ್ರೀ'.

ಶಶಿ, ಈ ಕಾಗದದಲ್ಲಿ ಶ್ರೀಯುವರ ಸಾಹಿತ್ಯಸೃಷ್ಟಿಯ ಪರಿಚಯ ಮಾಡಿದ್ದೇನೆ. ನಿನಗೆ ಯಾವುದರಲ್ಲಿ 'ಆಸಕ್ತಿ' ಇದೆ ಎಂಬುದನ್ನು ಕುರಿತು ಪತ್ರ ಬರೆ. ಉತ್ತರಿಸುತ್ತೇನೆ, ನಿನ್ನ ಚಿಕ್ಕಪ್ಪ ಚಿಕ್ಕಮ್ಮನವರಿಗೆ ನನ್ನ ಆಶೀರ್ವಾದ ತಿಳಿಸು.

ನಿನ್ನ ಪ್ರೀತಿಯ ಅಪ್ಪಾಜಿ,
ಹೊ. ಶ್ರೀ.

ಪತ್ರ—3

ದಿನಾಂಕ 10, ನವೆಂಬರ್
ಮೈಸೂರು

ಪ್ರೀತಿಯ ಅಪ್ಪಾಜಿ,

ನಿಮ್ಮ ಕಾಗದ ತಲುಪಿತು. ಇದನ್ನು ಓದಿದ ಮೇಲೆ ಕವಿತೆ, ನಾಟಕ, ಬರೆಯಬೇಕೆಂಬ ಆಸೆ ನನಗೆ. ಪ್ರಯತ್ನ

ಪಡುತ್ತೇನೆ. ಅಂದರೆ ನಾನು ಹೆಚ್ಚಾಗಿ ಓದಬೇಕು ಅಲ್ವೆ, ಅಪ್ಪಾಜಿ ?

ನಿಮ್ಮ ಕಾಗದದಲ್ಲಿ ಬಿ. ಎಂ. ಶ್ರೀಯವರು ಕನ್ನಡದ ಕಣ್ವರು ಎಂದು ಬರೆದಿದ್ದೀರಿ. ಕಣ್ವ ಯಾರು, ಇವರು ಹೇಗೆ ಕನ್ನಡದ ಕಣ್ವರು? ಈ ಕಥೆಯನ್ನು ತಿಳಿಸುವಿರಾ ? ಕನ್ನಡ ನಾಡಿಗೆ ಮತ್ತು ನುಡಿಗೆ ಅವರ ಸೇವೆ ಹೇಗೆಂಬುದನ್ನು ನಾನು ತಿಳಿಯ ಬೇಕು.

ನಿಮ್ಮ ಕಾಗದವನ್ನು ನನ್ನ ಗೆಳತಿಯರಿಗೆ ತೋರಿಸಿದೆ. ಎಲ್ಲರೂ ಓದಿದರು. ಉಪಾಧ್ಯಾಯರಿಗೂ ತೋರಿಸಿದೆ. ಸಂತೋಷಪಟ್ಟರು. ನನ್ನ ತರಗತಿಯ ವಿದ್ಯಾರ್ಥಿನಿಯರಿಗೆ ಬಿ. ಎಂ. ಶ್ರೀಯವರ ವಿಚಾರ ಬರೆದುತಂದು ಓದಿ ಅಂದರು. ನಿಮ್ಮ ಕಾಗದ ಬಿ. ಎಂ. ಶ್ರೀಯವರ ಜೀವನ ಚರಿತ್ರೆಯ ಕೋಶ ದಂತಿದೆ, ಅಲ್ಲವೇ ಅಪ್ಪಾಜಿ ?

ನಿಮ್ಮ ಮುಂದಿನ ಕಾಗದವನ್ನು ಎದುರು ನೋಡು ತ್ತಿದ್ದೇನೆ. ಎಲ್ಲ ಕಡೆಯಲ್ಲೂ ಕನ್ನಡ ರಾಜ್ಯೋತ್ಸವ ಚೆನ್ನಾಗಿ ನಡೆಯುತ್ತಿದೆ. ನಿಮ್ಮ ಕಾಗದ ಓದಿದ ಮೇಲೆ ನನಗೆ ಕುಳಿತಲ್ಲೇ ಕನ್ನಡದ ಉತ್ಸವ.

ಇಂತಿ ನಿಮ್ಮ ಪ್ರೀತಿಯ
ಶಶಿ

ಪತ್ರ—4

ದಿನಾಂಕ 15. ನವೆಂಬರ್
ಬೆಂಗಳೂರು


ಪ್ರೀತಿಯ ಶಶಿ,

ನಿನ್ನ ಪತ್ರ ತಲುಪಿತು. ನೀನು ನಿಜಕ್ಕೂ ತುಂಬಾ ಬುದ್ಧಿವಂತೆ. ವಿಷಯ ತಿಳಿದು ಕುತೂಹಲ ಕೆರಳಿಸಿಕೊಂಡಿದ್ದೀಯ. ಒಳ್ಳೆಯದು. ಶ್ರೀಯವರನ್ನ ಕನ್ನಡದ ಕಣ್ವರೆಂದು ಕರೆದರು ಹಿರಿಯರೂ, ಪೂಜ್ಯರೂ ಆದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು. ಕನ್ನಡಿನಾಡಿನ ಶ್ರೇಷ್ಠ ಸಾಹಿತಿಗಳಲ್ಲಿ ಮಾಸ್ತಿಯವರೇ ತುಂಬ ಹಿರಿಯರು.

ಇಂದಿನ ಕರ್ನಾಟಕ ಹಿಂದೆ ಬ್ರಿಟಿಷರ ಅಧೀನದಲ್ಲಿತ್ತು. ಆಡಳಿತದ ಸೌಕರ್ಯಕ್ಕೆ ಅವರು ಹಲವಾರು ವಿಭಾಗಗಳಾಗಿ ಹಂಚಿದರು. ಹೀಗೆ ಮಾಡಿದಾಗ ಬೇರೆ ಬೇರೆಯವರ ಆಡಳಿತಕ್ಕೆ ಒಳಗಾಗಿ ಕನ್ನಡಿಗರು ಹರಿದುಹಂಚಿ ಹೋದರು. ಕನ್ನಡತನ ಕಳೆದುಕೊಂಡರು. ಆಚಾರ ವ್ಯವಹಾರದಲ್ಲಿ, ಉಡುಗೆ ತೊಡುಗೆಯಲ್ಲಿ, ಊಟ ಉಪಚಾರಗಳಲ್ಲಿ ತಮ್ಮತನ ಮರೆತರು. ಕನ್ನಡವನ್ನು ಮನೆಮಾತಾಗಿ ಆಡಲು ಹಿಂಜರಿದರು. ಹೀನಾಯವೆಂದು ತಿಳಿದರು. ತಮ್ಮ ಮಕ್ಕಳಿಗೆ ಕನ್ನಡ ಕಲಿಸಲಿಲ್ಲ. ಬ್ರಿಟಿಷ್‌ನವರು ಇಂಗ್ಲಿಷನ್ನು ಆಡಳಿತ ಭಾಷೆಯಾಗಿಸಿಕೊಂಡರು.

ಓದು ಬರಹ ಬಲ್ಲವರು ನಿತ್ಯದ ವ್ಯವಹಾರದಲ್ಲಿ ಇಂಗ್ಲಿಷ್ ಬಳಸಿದರು. ಕನ್ನಡದ ಕಡೆ ಗಮನ ನೀಡಲಿಲ್ಲ. ಉದಾಸೀನ ಮಾಡಿದರು. ಕನ್ನಡ ತನ್ನ ನಾಡಿನಲ್ಲಿಯೇ ಆಸರೆ ಇಲ್ಲ ದಂತಾಯಿತು ; ಅನಾಥವಾಯಿತು. ತಬ್ಬಲಿಯಾಗಿದ್ದ ಕನ್ನಡ ಕೂಸನ್ನು ರಕ್ಷಿಸಿದ ಧೀಮಂತ ಯಾರು ಗೊತ್ತೆ? ಬಿ. ಎಂ. ಶ್ರೀ. ಅನಾಥವಾಗಿದ್ದ ಕನ್ನಡಕ್ಕೆ ರಕ್ಷಣೆ ನೀಡಿದರು. ಚೈತನ್ಯ ತುಂಬಿದರು. ಬೆಳೆಸಿದರು. ಆದರಿಂದ ಮಾಸ್ತಿಯವರು ಶ್ರೀಯವರನ್ನ ಕನ್ನಡದ ಕಣ್ವರೆಂದರು.

ಕಣ್ವರ ಕಥೆ ತಿಳಿಯುವ ಆಸೆ ನಿನಗೆ, ಅಲ್ಲವೆ ! ಕಣ್ವರು ಒಬ್ಬ ಮಹಾಋಷಿ. ಸಂಸ್ಕೃತ ಮಹಾಭಾರತದ ಕಥೆಯಲ್ಲಿ ಒಂದು ಉಪಕಥೆ. ಶಕುಂತಲೆ, ವಿಶ್ವಾಮಿತ್ರ ಮತ್ತು ಮೇನಕೆಯರ ಶಿಶು. ಆಗತಾನೇ ಹುಟ್ಟಿದ ಮಗುವನ್ನು ಕಾಡಿನಲ್ಲಿ ಬಿಟ್ಟರು. ಇಬ್ಬರೂ ಹೊರಟುಹೋದರು. ಮಗು ತಬ್ಬಲಿಯಾಯಿತು. ಕಾಡಿನ ಎರಡು ಪಕ್ಷಿಗಳು ಅನಾಥ ಶಿಶುವಿಗೆ ರೆಕ್ಕೆಯಿಂದ ಗಾಳಿ ಬೀಸುತ್ತಿದ್ದವು, ಅಳದಂತೆ ನೋಡಿಕೊಳ್ಳು ತ್ತಿದ್ದವು. ಆದರೂ ಮಗು ಹಠದಿಂದ ಅಳುತ್ತಿತ್ತು. ಮತ್ತೊಂದು ಗಂಡು ಪಕ್ಷಿ ಆಹಾರ ತಂದು ಮಗುವಿಗೆ ನೀಡುತ್ತಿದೆ, ಆದರೂ ಮಗು ಅಳು ನಿಲ್ಲಿಸಲಿಲ್ಲ. ಅದೇ ಮಾರ್ಗದಲ್ಲಿ ಕಣ್ವಮುನಿ ಹೋಗುತ್ತಿದ್ದರು. ತಬ್ಬಲಿ ಶಿಶುವನ್ನು ಆ ಎರಡು ಪಕ್ಷಿಗಳು ಕಾಪಾಡುವುದನ್ನು ನೋಡಿದರು. ಅವರಿಗೆ ಆಶ್ಚರ್ಯ. ಪಕ್ಷಿಗಳ ಕರುಣೆ ನಿಜಕ್ಕೂ ಮೆಚ್ಚುವಂಥದ್ದು. ಅವುಗಳಿಗೇ ಇಷ್ಟು ಕರುಣೆ ಇದ್ದರೆ ಇನ್ನು ಮನುಷ್ಯರಿಗೆ ಕೇಳಬೇಕೆ ? ಕಣ್ವರ ಮನಸ್ಸು ಕರಗಿತು. ಕೂಡಲೇ ಮಗುವನ್ನು ಎತ್ತಿಕೊಂಡರು.



'ಶ್ರೀ' ಅವರು, ಅವರ ಕೃತಿಗಳು

ಮುದ್ದಾಡಿದರು. ಆಶ್ರಮಕ್ಕೆ ಎತ್ತಿಕೊಂಡು ಹೋದರು. ಮಗುವಿಗೆ "ಶಕುಂತಲಾ" ಎಂದು ನಾಮಕರಣ ಮಾಡಿದರು. ಏಕೆಂದರೆ ಶಕುಂತ ಅಂದರೆ ಪಕ್ಷಿಗಳಿಂದ ಲಾಲನೆಪಾಲನೆ ಆದವಳು ಎಂದು. ಅನಾಥವಾಗಿದ್ದ ಶಿಶುವಿಗೆ ಕಣ್ವರು ಸಾಕುತಂದೆಯಾದರು.

ಶಕುಂತಲೆಯ ಸ್ಥಿತಿಯೇ ಕನ್ನಡಕ್ಕೆ ಬಂದಿತ್ತು. ಕಣ್ವ ಋಷಿ ಶಕುಂತಲೆಯನ್ನ ಸಾಕಿದಂತೆ ಶ್ರೀಕಂಠಯ್ಯನವರು ಕನ್ನಡದ ಪೋಷಕರಾದರು; ರಕ್ಷಕರಾದರು. 'ಕನ್ನಡದ ಕಣ್ವರು' ಎಂದೇ ಪ್ರಸಿದ್ಧರು. ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರಿನಲ್ಲಿದೆ. ಇದು 1915ರಲ್ಲಿ ಪ್ರಾರಂಭವಾಯಿತು. ನೀನು ಭಾರತರತ್ನ ವಿಶ್ವೇಶ್ವರಯ್ಯನವರ ಹೆಸರನ್ನು ಕೇಳಿರಬೇಕು. ಅವರ ಮುಂದಾಲೋಚನೆಯ ಪರಿಣಾಮ ಸಾಹಿತ್ಯ ಪರಿಷತ್ ಪ್ರಾರಂಭ. ಕನ್ನಡ ಭಾಷೆ, ಕನ್ನಡ ಸಂಸ್ಕೃತಿ ಇವನ್ನು ಕಾಪಾಡುವ ಮತ್ತು ಬೆಳೆಸುವ ಹೊಣೆ ಈ ಸಂಸ್ಥೆಯದು. ಇದಕ್ಕೆ ಹಲವು ಹಿರಿಯರ ಸೇವೆ ದೊರೆತಿದೆ. ಅವರಂತೆ ಶ್ರೀಯವರು ಕನ್ನಡದ ಸೇವೆಗೆ ಕಂಕಣಬದ್ಧರಾದರು. ಕನ್ನಡ ಸಾಹಿತ್ಯ ಪರಿಷತ್ ಇವರ ಕಾರ್ಯಕ್ಷೇತ್ರ. ಕನ್ನಡಿಗರ ಹಿತಸಾಧನೆಗೆ ತನ್ನ ಜೀವನ ಮುಡಿಪು ಎಂದರು. ಕನ್ನಡಿಗರು ಎಲ್ಲಿಯೇ ಇರಲಿ, ಹೊರನಾಡಿನಲ್ಲಿರಲಿ, ಅವರೆಲ್ಲರನ್ನೂ ಒಟ್ಟುಗೂಡಿಸುವ ಛಲ ಅವರದು. ಇದಕ್ಕಾಗಿ ಸಾಹಿತ್ಯ ಪರಿಷತ್ತಿಗೆ ಅವರ ಪ್ರವೇಶ. 1938ರಲ್ಲಿ ಉಪಾಧ್ಯಕ್ಷರಾಗಿದ್ದರು.

ಇವರಿಗೆ ಕನ್ನಡದ ವಿಚಾರ ಜನರಿಗೆ ತಿಳಿಸುವ ಹಂಬಲ.
2 ಅದಕ್ಕಾಗಿ ಪರಿಷತ್ತಿನಲ್ಲಿ ಹಲವಾರು ಯೋಜನೆಗಳು ಮೂಡಿದವು.

ಅವನ್ನು ತಿಳಿಸಲು ಒಂದು ಮುಖ್ಯಪತ್ರಿಕೆಯು ಅಗತ್ಯ ಕಂಡು ಕೊಂಡರು. ಹೀಗಾಗಿ ಜನಗಳ ತಿಳಿವಳಿಕೆಗೆ ಪತ್ರಿಕೆ ಪ್ರಾರಂಭ. ಅದೇ "ಕನ್ನಡ ನುಡಿ"! ಈಗಲೂ ಈ ಪತ್ರಿಕೆ ಬರುತ್ತಿದೆ.

ಪರಿಷತ್ತಿನ ಹಲವಾರು ಯೋಜನೆಗಳ ರೂಪರೇಷೆ ಮತ್ತು ಕನ್ನಡಿಗರ ಸಂಸ್ಕೃತಿಯ ಮಹತ್ವವನ್ನು ತಿಳಿಸುವ ಹೊಣೆ 'ಕನ್ನಡ ನುಡಿ'ಯದು. ಪತ್ರಿಕೆ ಜನತೆಗೆ ಸಮೀಪವಾಗಬೇಕು. ನಾಡಿನ ಎಲ್ಲರ ಮನೆಯ ತಿಳಿವಾಗಬೇಕು. ಪತ್ರಿಕೆಯಿಲ್ಲದೆ ತಿಳಿವಿನ ಬೆಳಕು ಕನ್ನಡಿಗರಲ್ಲಿ ಹರಡಲು ಅಸಾಧ್ಯ. ಪರಿಷತ್ತಿನ ಅಚ್ಚುಕೂಟಕ್ಕೆ ಶ್ರೀಯುವರು ಪಟ್ಟಶ್ರಮ ಅಷ್ಟಿಷ್ಟಲ್ಲ. ಮೊದಲು ಪುಸ್ತಕಗಳು, ಪತ್ರಿಕೆಗಳು ಸಕಾಲಕ್ಕೆ ಪ್ರಕಟವಾಗುತ್ತಿರಲಿಲ್ಲ. ಶ್ರೀಯುವರ ಯೋಚನೆ ಅಚ್ಚುಕೂಟದ ಕಡೆಗೆ. ಹೇಗಾದರೂ ಸ್ಥಾಪಿಸುವ ಆಲೋಚನೆ. ಇದಕ್ಕಾಗಿ ಅವರಿಂದ ಆರು ಸಾವಿರ ರೂ.ಗಳ ದಾನ. ಮದರಾಸಿಗೆ ಸ್ನೇಹಿತರನ್ನ ಕಳಿಸಿ ಅಚ್ಚುಕೂಟದ ವ್ಯವಸ್ಥೆ ಮಾಡಲಾಯಿತು. ಈಗ ಇವರ ಹೆಸರಿನಲ್ಲಿಯೇ ಅಚ್ಚು ಕೂಟ ನಡೆಯುತ್ತಿದೆ.

ಕನ್ನಡ ಸಾಹಿತ್ಯ. ಜನರ ಹೃದಯ ಮುಟ್ಟಬೇಕು. ಜನರಲ್ಲಿ ಓದು ಬರಹದ ಬಗೆಗೆ ಆಸಕ್ತಿ ಹುಟ್ಟಿಸುವುದು, ಸಾಹಿತ್ಯದ ಬಗ್ಗೆ ಆಸಕ್ತಿ ಹುಟ್ಟುವ ಹಾಗೆ ಮಾಡುವುದು ಶ್ರೀಯುವರ ಆಲೋಚನೆ ಅದಕ್ಕೆ ತಕ್ಕ ಏರ್ಪಾಡು. ಸಾಹಿತ್ಯ ಪರಿಷತ್ತಿನಲ್ಲಿ ಮೂರು ಸಾಹಿತ್ಯ ಪರೀಕ್ಷೆಗಳ ವ್ಯವಸ್ಥೆ. ಕನ್ನಡ ಅಣುಗ, ಕನ್ನಡ ಕಾವ್ಯ, ಕನ್ನಡ ಜಾಣ. ಹಂತ ಹಂತದಲ್ಲಿ ಇದರ ವ್ಯವಸ್ಥೆ. ಪರೀಕ್ಷೆಯ ಸಿದ್ಧತೆಗೆ ಪರಿಷತ್ತಿನಲ್ಲಿಯೇ ತರಗತಿಗಳ ಪ್ರಾರಂಭ. ಶ್ರೀಯುವರೇ

ತರಗತಿಯಲ್ಲಿ ಪಾಠ ಹೇಳುತ್ತಿದ್ದರು. 'ಕನ್ನಡ ಜಾಣ' ತರಗತಿಗಳ ವಿದ್ಯಾರ್ಥಿಗಳಿಗೆ ಇವರ ಪಾಠ ಕೇಳುವ ಸುಯೋಗ. ಎಂತಹ ಸೌಭಾಗ್ಯ ಆ ಶಿಷ್ಯರಿಗೆ!

ಭಾಷೆಯ ಬೆಳವಣಿಗೆಗೆ ಶ್ರೀಯವರದು ಹೆಚ್ಚಿನ ಮಹತ್ವ. ಕನ್ನಡ ತಲೆ ಎತ್ತುವ ಬಗೆಗೆ ಹಲವು ಕಡೆ ಭಾಷಣ. ಇವರ ಭಾಷಣ ಅತ್ಯಂತ ಆಕರ್ಷಕ. ಭಾಷಣದ ಕಲೆ ಇವರಿಗೆ ಬಂದ ದೈವದತ್ತವಾದ ವರ. ಭಾಷೆಯ ಶುದ್ಧಿಗೆ ತಕ್ಕಂತೆ ವ್ಯಾಕರಣ, ಪದಬಳಕೆ. ಸಂಸ್ಕೃತ ಗ್ರಂಥಗಳ ವ್ಯಾಕಗಳನ್ನು ಒತ್ತಿ ಒತ್ತಿ ಹೇಳುತ್ತಿದ್ದರು. ನಳದಮಯಂತಿ, ಸಾವಿತ್ರಿ, ನಚಿಕೇತ ಪ್ರಸಂಗ, ಮಹಾಭಾರತದ ಪ್ರಕರಣಗಳು, ಭಗವದ್ಗೀತೆ, ಶಾಕುಂತಲ ಕಥೆಗಳನ್ನು ಹೇಳಿ ಅವುಗಳ ಹಿರಿಮೆ ಹೇಳುತ್ತಿದ್ದರು. ಸಾಹಿತಿಗಳಿಗೆ, ಕವಿಗಳಿಗೆ ಶ್ರೀಯವರ ಸಲಹೆ. "ಕನ್ನಡ ನುಡಿಯ ರಚನೆ ಓದದವರಿಗೂ ಅರ್ಥವಾಗಲಿ. ಹೆಂಗಸರು ಮಕ್ಕಳಿಗೆ ಆಸಕ್ತಿ ಹುಟ್ಟಿಸಲಿ". ಇದಕ್ಕಾಗಿ ಶ್ರೀಯವರೇ ಕನ್ನಡಕ್ಕೆ ತೊಡರಾಗಿದ್ದ ಸಂಸ್ಕೃತದ ವಿರೋಧಿಯಾಗಬೇಕಾಯಿತು. ಹಾಗೆ ಹೇಳಿದವರಿಗೆ ಶ್ರೀಯವರ ಉತ್ತರ–"ಬಹುಮಟ್ಟಿಗೆ ಸಂಸ್ಕೃತ ರೀತಿ ಗುಣ ಸಂಪತ್ತು ಕನ್ನಡದಲ್ಲಿ ಬಂದಿದೆ. ಭಾರತ ಸಂಸ್ಕೃತಿಯ ಆಧಾರ ನಮ್ಮ ಕನ್ನಡ ಸಾಹಿತ್ಯ ಭಂಡಾರ. ಅದನ್ನು ಮತ್ತಷ್ಟು ಸಮೃದ್ಧಗೊಳಿಸುವ ಕೆಲಸ ನಮ್ಮದು."

ಕನ್ನಡ ಕಾವ್ಯ ಸಂಗ್ರಹ ಸಂಪಾದನೆ. ಕೈಪಿಡಿಯ ರೀತಿಯಲ್ಲಿ ಪ್ರಕಟನೆ. ಸುಲಭ ಬೆಲೆಗೆ ಮಾರಾಟ. ಎಲ್ಲರೂ ಕೊಳ್ಳುವ ಹಾಗೆ ದರ. ಅದಕ್ಕಾಗಿ ಬಹಳ ಹೋರಾಟ.

ಯಾವಾಗಲೂ ದುಡಿತ. ಮುಖ್ಯ ಮುಖ್ಯ ಭಾಗಗಳ ಪರಿಚಯಿಸುವ ಕೆಲಸ. ಕಥಾಭಾಗಕ್ಕೆ ಸಂಬಂಧಿಸದ ಅಂಶಕ್ಕೆ ಗಮನವಿಲ್ಲ. ಕಷ್ಟಪದಗಳಿಗೆ ಅಲ್ಲಲ್ಲಿ ಅರ್ಥವಿವರಣೆ. ಈ ಕೆಲಸವನ್ನು ಶ್ರೀಯವರು ಕೈಗೊಂಡರು. ವಿದ್ವಾಂಸರಿಂದ ಮಾಡಿಸಿದರು. ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿದರು.

ಮಹಿಳೆಯರ ಬಗ್ಗೆ ಶ್ರೀಯವರಿಗೆ ಅಪಾರ ಗೌರವ. ಪರಿಷತ್ತಿನ ಕೆಲಸದಲ್ಲಿ ಮಹಿಳೆಯರೂ ತೊಡಗುವಂತಾಗಲು ಆಲೋಚನೆ. ಇದಕ್ಕಾಗಿ ಮಹಿಳೆಯರಿಗೆ ಬೇರೊಂದು ಶಾಖೆ ಪ್ರಾರಂಭ.

ಕನ್ನಡ ಸುಂದರವಾದ ಭಾಷೆ. ಮುದ್ದಾದ ಅಕ್ಷರ. ಲಿಪಿಯಲ್ಲಿ ಸುಧಾರಣೆ ತರಲು ಶ್ರೀಯವರ ಪ್ರಯತ್ನ. ಲಿಪಿಯಲ್ಲಿ ಅದೆಂತಹ ಸುಧಾರಣೆ! ನಮಗೆ ಆಶ್ಚರ್ಯ. ಬೆರಳಚ್ಚು ಯಂತ್ರಕ್ಕೆ ಇದು ಅಗತ್ಯ. ಲಿಪಿ ಸುಧಾರಣೆ ಮಾಡಿ ತೋರಿಸಿದರು. ಇದು "ಕನ್ನಡ ಬಾವುಟ" ಕವನ ಸಂಕಲನದಲ್ಲಿ ಅಚ್ಚಾಯಿತು.

ಸುಧಾರಣೆಯ ಉದಾಹರಣೆ ಈ ರೀತಿ ಇದೆ:

"ಕನ್ನಡದ ಬಾವುಟವ ಹಿಡಿಯದವರಾರು ?"

"ಕನ್‌ನಡದ ಬಾವುಟವ ಹಿಡಿಯದವರಾರು? "

ಕನ್ನಡದ ಬೆಳವಣಿಗೆಗೆ ಸರ್ವರೀತಿಯಲ್ಲೂ ಶ್ರೀಯವರ ಚಿಂತನೆ.

ಶ್ರೀಯವರಿಗೆ ತರುಣರ ಮೇಲೆ ಅಪಾರ ಪ್ರೀತಿ. ಹಿರಿಯ ಸಾಹಿತಿಗಳಾದ ಮಾಸ್ತಿಯವರನ್ನ ಕೇಳಿದ್ದೀಯಲ್ಲಾ. ಅವರೂ

ಶ್ರೀಯುವರ ಶಿಷ್ಯರು. ಪ್ರೀತಿಯಿಂದ ಅವರ ಭುಜಗಳ ಮೇಲೆ ಕೈಹಾಕಿ ಅವರನ್ನು ಹುರಿದುಂಬಿಸುತ್ತಿದ್ದರು. ಪ್ರೋತ್ಸಾಹ ನೀಡುತ್ತಿದ್ದರು. ಪರಿಷತ್ತಿನ ಉಪಾಧ್ಯಕ್ಷ ಸ್ಥಾನ ಬಿಟ್ಟರು. ಆ ಹುದ್ದೆಗೆ ತರುಣರು ಇರಬೇಕು. ಅದರ ಹೊಣೆ ಯುವಕರಿಗೆ. ಸರಿಯಾದವರ ಕೈಯಲ್ಲಿ ಕೊಟ್ಟಿದ್ದೇನೆಂದು ಮಾಸ್ತಿಯವರಿಗೆ ವಹಿಸಿದರು.

"ನಾನು ಹೊತ್ತಿಸಿದ ಕನ್ನಡದ ಪಂಜು ಸಾಹಿತ್ಯ ಪರಿಷತ್. ಅದು ಸದಾ ಉರಿಯುತ್ತಿರಬೇಕು. ಅದರ ಪ್ರಕಾಶ ಕನ್ನಡಿಗರಿಗೆ. ಅದರ ಜ್ಞಾನ ಕನ್ನಡಿಗರಿಗಾಗಲಿ. ಅದನ್ನು ಬೆಳೆಸುವ ಜವಾಬ್ದಾರಿ ತರುಣರದು" ಎಂದರು. ಶ್ರೀಯವರು ಹೊತ್ತಿಸಿದ ಪಂಜು ಇಂದಿಗೂ ಪ್ರಕಾಶಮಾನವಾಗಿ ಉರಿಯುತ್ತಲಿದೆ.

ಶ್ರೀಯವರ ಸೇವೆ ಮಹತ್ತರವಾದುದು. ಕನ್ನಡಿಗರು ಇವರ ಸೇವೆಗೆ ಚಿರಋಣಿ. ಸೇವೆಯ ನೆನಪು ಸದಾ. ಮೈಸೂರು ಮಹಾರಾಜರು ಅವರನ್ನು ಸನ್ಮಾನಿಸಿದರು. 'ರಾಜಸೇವಾಸಕ್ತ' ಎಂಬ ಬಿರುದು ಇವರಿಗೆ ಸಂದಿತು. ಶ್ರೀಯವರ ಕೊರಳಲ್ಲಿ ಗಂಡಭೇರುಂಡ, ಮೈಸೂರು ರಾಜ್ಯದ ಗುರುತಿನ ಪದಕ ಪ್ರಕಾಶಿಸಿತು.

ಶ್ರೀಯವರ ಶಿಷ್ಯರು ಗುರುವಿನ ವರ್ಧಂತಿಯ ಉತ್ಸವ ನಡೆಸಿದರು. ಶ್ರೀಯವರಿಗೆ ಐವತ್ತೆಂಟು ವರ್ಷವಾಗಿತ್ತು. ಈ ಸಂದರ್ಭದಲ್ಲಿ 'ಸಂಭಾವನೆ' ಎಂಬ ಗ್ರಂಥವನ್ನು ಅವರಿಗೆ ಅರ್ಪಿಸಿದರು.

ಆಗ ಮೈಸೂರು ಸಂಸ್ಥಾನದ ಮಹಾರಾಜರು ನಾಲ್ಮಡಿ ಕೃಷ್ಣರಾಜ ಒಡೆಯರು. ಅವರ ಬಗ್ಗೆ ಶ್ರೀಯವರಿಗೆ ಅಪಾರ ರಾಜಭಕ್ತಿ. ಸಾಹಿತ್ಯ ಪರಿಷತ್ತಿನ 'ಬೆಳ್ಳಿಹಬ್ಬ' ಶ್ರೀಯವರ ಕಾಲದಲ್ಲಿ ವಿಜೃಂಭಣೆಯಿಂದ ವ್ಯವಸ್ಥೆಗೊಳಿಸಿದರು. ಕೃಷ್ಣರಾಜ ಒಡೆಯರನ್ನು ಕರೆಸಿ ವೈಭವದಿಂದ ರಜತ ಮಹೋತ್ಸವ ಜರುಗಿಸಿದರು.

1928ರ ಗುಲ್ಬರ್ಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪದವಿ ಶ್ರೀಯವರಿಗೆ. ಅಲ್ಲಿ ಅವರು ಮಾಡಿದ ಭಾಷಣ ಸದಾ ಜನರ ಮನದಲ್ಲಿ ನೆಲೆನಿಲ್ಲುವಂತಹದು. ಗುಲ್ಬರ್ಗದ ಜನರ ಕನ್ನಡ ಬರವಣಿಗೆ ದೇವನಾಗರಿಲಿಪಿ ; ಮತ್ತೆ ಮೋಡಿ ಅಕ್ಷರ ಬೇರೆ. ಇದರ ಬಗ್ಗೆ ವಿವರಣೆ ನೀಡಿದರು. ಸಮ್ಮೇಳನ ಮುಗಿಸಿ ಬರುವಾಗ ರಾಯಚೂರಿನವರ ಮನವಿ: "ಸಮ್ಮೇಳನದ ಸಾರ ನಮಗೂ ತಿಳಿಸಿ." ರಾಯಚೂರಿನ ಕೆಲವು ಗಣ್ಯರು ಇವರ ಭಾಷಣಕ್ಕೆ ವ್ಯವಸ್ಥೆ ಮಾಡಿದರು. ರೈಲು ಬರುವುದು ತಡವಾಯಿತು. ಸೇರಿದ್ದ ಜನ ಚೆದರಿ ಹೋಗಿದ್ದರು. ಶ್ರೀಯವರು ಬಂದ ತಕ್ಷಣ, ವ್ಯವಸ್ಥಾಪಕರು ಊರಿನಲ್ಲಿ ಡಂಗುರ ಹೊಡೆಸಿದರು. ಊರಿನ ಜನರನ್ನು ಬರಮಾಡಿಕೊಂಡರು. ಎಲ್ಲೆಲ್ಲೂ ಜನ. ಜನರು ಉತ್ಸುಕತೆಯಿಂದ ಬಂದರು. ಭಾಷಣ ಕೇಳಿದರು. ಹಲವಾರು ಕವನಗಳನ್ನು ಹೇಳಿ ಭಾಷಣ ಮಾಡುತ್ತಿದ್ದರೆ, ಬೆರಗಾಗಿ ಕೇಳುತ್ತಿದ್ದರು. ಶ್ರೀಯವರ ಭಾಷಣ ಕಲೆ ನಿಜಕ್ಕೂ ಅದ್ಭುತ, ಜನ ಸಂತೋಷಗೊಂಡರು. ಸಭೆ ಮುಗಿಯಿತು. ಶ್ರೀಯವರಿಗೆ ವಿಶೇಷವಾಗಿ ಭೋಜನ ಏರ್ಪಾಡಾಗಿತ್ತು. ವಿಶಿಷ್ಟ ಬಗೆಯ ಭೋಜನ. ಊಟವಾಯಿತು. ಶ್ರೀಯವರು ಕೇಳಿದರು

"ಇಷ್ಟೊಂದು ವೆಚ್ಚ ಏಕೆ ಮಾಡಿದಿರಿ". ಅವರ ಉತ್ತರ; "ಸ್ವಾಮಿ ಒಬ್ಬ ತಹಶೀಲ್ದಾರ ಬಂದರೆ ಎಷ್ಟು ಖರ್ಚು ಮಾಡುತ್ತೇವೆ! ನಿಮ್ಮಂತಹವರು ಇಲ್ಲಿಗೆ ಬಂದದ್ದೇ ನಮ್ಮ ಪುಣ್ಯ. ನಿಮ್ಮ ದರ್ಶನದ ಮುಂದೆ ಈ ಖರ್ಚು ಯಾವ ಲೆಕ್ಕ" ಎಂದು ಹೇಳಿ ಪ್ರೀತಿಯಿಂದ ಹೂವು, ಹಣ್ಣು ಕೊಟ್ಟು ಕಳಿಸಿದ್ದರು. ಶ್ರೀಯವರು ಸದಾ ಕನ್ನಡಿಗರ ಸಜ್ಜನಿಕೆ, ಗೌರವವನ್ನು ನೆನೆಸಿಕೊಳ್ಳುತ್ತಿದ್ದರು.

ಶ್ರೀಯವರು ಅಧ್ಯಾಪಕ ವೃತ್ತಿಯನ್ನು ಸೇರಿದಾಗ ಅವರಿಗೆ ಇಪ್ಪತ್ತೈದು ವರ್ಷ. ಅಧ್ಯಾಪಕ ವೃತ್ತಿಯ ಪವಿತ್ರತೆ ಅರಿತರು. 1909 ಜನವರಿ 15ರಂದು ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕ. ವಿದ್ಯಾರ್ಥಿಗಳಿಗೆ ಮಾತ್ರ ಉಪಾಧ್ಯಾಯ. ಆದರೆ ಇವರು ಸದಾ ವಿದ್ಯಾರ್ಥಿಯೇ. ಪ್ರತಿದಿನವೂ ಕಾಲವ್ಯಯ ಮಾಡದೆ ಯಾವುದಾದರೊಂದು ಪುಸ್ತಕ ಓದುವರು. ಪರಿಪೂರ್ಣವಾಗಿ ತಿಳಿಯುವ ಮನಸ್ಸು. ಒಳ್ಳೆಯ ಗುರು ಸಿಗಬೇಕಾದರೂ ಪೂರ್ವಪುಣ್ಯ. ಶ್ರೀಯವರನ್ನು ಪಡೆದ ಶಿಷ್ಯರು ಮಹಾಮಹಿಮೆಯುಳ್ಳ ಸೌಭಾಗ್ಯವೇ ಸಿಕ್ಕಿದಂತೆ ಭಾವಿಸಿದರು. ಯೌವನವು ಪ್ರತಿಯೊಬ್ಬರಿಗೂ ಹಲವಾರು ಆಸೆಗಳು ಮೂಡುವ ಕಾಲ. ಒಳ್ಳೆಯ ಪದವಿ, ಅಧಿಕಾರ, ಮದುವೆ, ಆಸ್ತಿಗಳಿಕೆ, ಮುಂತಾದವು ಮನದಲ್ಲಿ ಮೂಡಿ ಬಂದು ನಿಲ್ಲುವುವು. ಆದರೆ ಶ್ರೀಯವರಿಗೆ ಹಾಗಾಗಲಿಲ್ಲ. ತಮಗೆ ಪ್ರಕೃತಿದತ್ತ ಯೌವನದಲ್ಲಿ ತನ್ನ ಕರ್ತವ್ಯಗಳನ್ನು ಕಂಡುಕೊಂಡರು. ಕನ್ನಡಿಗರ ಮೆಚ್ಚುಗೆಯೆ ನಾನು ಎದುರುನೋಡುವ ಫಲವೆಂದರು. ಸೋಮಾರಿತನ, ನಿರುತ್ಸಾಹ ಕಂಡವರೇ ಅಲ್ಲ. ನಿಗದಿಯಾದ ಗಂಟೆಗಿಂತ ಹೆಚ್ಚು ಕಾಲ ಒಲವಿನಿಂದ, ಗೆಲುವಿನಿಂದ ಪಾಠ ಹೇಳುತ್ತಿದ್ದರು.

ಶ್ರೀಯುವರು ಕಾರ್ಯತತ್ಪರರು. ಚಿಕ್ಕಂದಿನಲ್ಲಿಯೇ ಶ್ರೀಯವರು ಹೆಂಡತಿಯನ್ನು ಕಳೆದುಕೊಂಡರು. ಸತ್ತ ದಿನ ಎಲ್ಲ ಕಾರ್ಯವನ್ನು ಮುಗಿಸಿದರು. ಎಂದಿನಂತೆಯೇ ಮಾರನೇ ದಿನ ಕಾಲೇಜಿಗೆ ಹೋದರು. ಪ್ರತಿದಿನ ಹೇಗೆ ಪಾಠ ಮಾಡುತ್ತಿದ್ದರೋ ಹಾಗೇ ಪಾಠ ಮಾಡಿದರು. ಇದು ಆಶ್ಚರ್ಯವಲ್ಲವೆ? ದುಃಖವನ್ನು ತಡೆದುಕೊಳ್ಳುವ ಶಕ್ತಿ ಅವರಲ್ಲಿತ್ತು. "ರಜೆ ತೆಗೆದುಕೊಳ್ಳಿ, ವಿಶ್ರಾಂತಿ ಪಡೆಯಿರಿ' ಎಂದಾಗ, "ನಾನು ರಜೆ ತೆಗೆದುಕೊಂಡು ಏನು ಮಾಡಲಿ" ಎಂದರು.

ಶ್ರೀಯುವರಿಗೆ ಒಮ್ಮೆ ಬಲಭುಜದ ಮೂಳೆ ಮುರಿಯಿತು. ಇವರಿಗಾದ ಆಘಾತ ಕೇಳಿ ಕಾಲೇಜಿನ ಮುಖ್ಯಸ್ಥ 'ಸೆಲ್' ಅವರ ಮನೆಗೆ ಹೋದರು. ಶ್ರೀಯುವರನ್ನ ಮಾತನಾಡಿಸಿದರು. ಬರುವಾಗ ಕೇಳಿದರು, "ನೀವು ವಿಶ್ರಾಂತಿ ಪಡೆಯಬೇಕಾಗುತ್ತೆ. ನಿಮ್ಮ ತರಗತಿಗಳಿಗೆ ಪಾಠ ಹೇಳಲು ಏರ್ಪಾಡು ಮಾಡಬೇಕಾಗುವುದು" ಎಂದರು. "ನಿಮಗೇಕೆ ಚಿಂತೆ ಸ್ವಾಮಿ. ನನ್ನ ಪಾಠ ನಾನೇ ಮಾಡುತ್ತೇನೆ" ಎಂದರು ಶ್ರೀ. ಮಾರನೆಯ ದಿನವೇ ಕಾಲೇಜಿಗೆ ಹೋದರು ಕಷ್ಟದಿಂದಲೇ, ದಟ್ಟಿಪಂಚೆ, ಷರ್ಟು, ಮೇಲೊಂದು ಕರಿಯ ಗೌನು, ತಲೆಗೊಂದು ಟೋಪಿ. ಈ ವಿಚಿತ್ರ ಉಡುಗೆ ತೊಟ್ಟರು. ಷೇಕ್ಸ್‌ಪಿಯರ್‌ನ ನಾಟಕವನ್ನು ಎಡಗೈಯಲ್ಲಿ ಹಿಡಿದು ಪಾಠ ಮಾಡಿದರು. ಇದು ನಿಜಕ್ಕೂ ಅದ್ಭುತ. ಅವರ ಕಾರ್ಯತತ್ಪರತೆಗೆ ಇದಕ್ಕಿಂತ ಉದಾಹರಣೆ ಬೇಕೆ?

ಶ್ರೀಯುವರು ಸತತ ಅಭ್ಯಾಸಿಗಳು. ಕಾಲವ್ಯಯ ಅವರ ಜಾಯಮಾನದಲ್ಲಿಲ್ಲ. ನೀನು ಕೇಳಿರಬೇಕಲ್ಲವೇ ಡಿ. ವಿ. ಗುಂಡಪ್ಪನವರ ಹೆಸರನ್ನು. ಈ ಡಿ.ವಿ.ಜಿ. ಕನ್ನಡದ ಪ್ರಖ್ಯಾತ ಕವಿಗಳು.

'ಮಂಕುತಿಮ್ಮನ ಕಗ್ಗ' ಬರೆದ ಗುಂಡಪ್ಪನವರು ಕನ್ನಡ ಪ್ರಪಂಚಕ್ಕೆ ವಿಖ್ಯಾತರಾದವರು. ಬೆಂಗಳೂರಿನಲ್ಲಿ ಶ್ರೀಯುವರಿದ್ದಾಗ ಇಬ್ಬರೂ ನಿತ್ಯವೂ ಬೆಳಿಗ್ಗೆ ಮತ್ತು ಸಂಜೆ ವಾಯುವಿಹಾರಕ್ಕೆ ಹೋಗುತ್ತಿದ್ದರು. ಒಂದು ದಿನ ಬೆಳಗ್ಗೆ ಡಿ. ವಿ. ಜಿ. ಯವರು ಶ್ರೀಯುವರ ಮನೆಗೆ ಹೋದರು. ಇನ್ನೂ ಕೊಠಡಿಯ ಬಾಗಿಲು ಮುಚ್ಚಿತ್ತು. ಬಾಗಿಲು ತಟ್ಟಿದರು, ತೆಗೆಯಲಿಲ್ಲ. ಜೋರಾಗಿ ಬಾಗಿಲು ಬಡಿದರು. ಬಾಗಿಲು ತೆರೆಯಿತು. ಒಳಗಡೆ ನೋಡಿದರೆ, ಶ್ರೀಯುವರು ಓಡಾಡುತ್ತಿದ್ದಾರೆ. ಬಾಯಿಯಲ್ಲಿ ಏನೇನೋ ಹೇಳಿಕೊಳ್ಳುತ್ತಿದ್ದಾರೆ. ಮೇಜಿನ ಮೇಲೆ 'ಡಾಂಟೆ' ಮಹಾಕವಿಯ ಪುಸ್ತಕ. ಯಾವುದೋ ಸಾಲುಗಳನ್ನು ಬಾಯಿಪಾಠ ಮಾಡುತ್ತಾ ಅತ್ತಿಂದಿತ್ತ ಇತ್ತಿಂದತ್ತ ಓಡಾಡುತ್ತಿದ್ದರು. ನಲವತ್ತು ವರ್ಷ ಇದೇ ಪುಸ್ತಕ ಪಾಠ ಹೇಳಿದರೂ ಮತ್ತೆ ಮತ್ತೆ ಓದುವ, ಹೆಚ್ಚು ಜ್ಞಾನ ಗಳಿಸಿಕೊಳ್ಳುವ ಮನೋಭಾವ ಅವರದು.

ವಿ. ಸೀತಾರಾಮಯ್ಯ ಹೆಸರನ್ನ ಕೇಳಿದ್ದೀಯಲ್ಲಮ್ಮ. ಮೊನ್ನೆ ಮೊನ್ನೆ ದೈವಾಧೀನರಾದರು. ಕನ್ನಡದ ಹಿರಿಯ ಸಾಹಿತಿಗಳು. ಐದು ಸಾರಿ ಶ್ರೀಯುವರ ಮನೆಗೆ ವಿ. ಸೀ. ಹೋದರು. ಶ್ರೀಯುವರ ಕೈಯಲ್ಲಿ ಪುಸ್ತಕ ಮತ್ತು ಪೆನ್ಸಿಲ್ ಇತ್ತು. ಜೇನ್ ಆಸ್ಟೆನ್ ಎಂಬಾಕೆಯ ಕಾದಂಬರಿ. ತರಗತಿಯಲ್ಲಿ ಸುಮಾರು ವರ್ಷ ಪಾಠ ಹೇಳಿದ್ದರೂ ಮತ್ತೆ ಅಲ್ಲಲ್ಲಿ ಗುರುತು ಹಾಕುತ್ತಿದ್ದುದನ್ನು ನೋಡಿದರು. ಒಳ್ಳೆಯ ಉಪಾಧ್ಯಾಯ ಯಾವಾಗಲೂ ಅಭ್ಯಾಸ ಮಾಡಿ ಜ್ಞಾನ ಹೆಚ್ಚಿಸಿಕೊಳ್ಳುವನು.

ಶ್ರೀಯುವರು ಉತ್ತಮ ಬೋಧಕರು. ಪಾಠ ಹೇಳೋ ರೀತಿಯೇ ಸೊಗಸು. ವಿದ್ಯಾರ್ಥಿಗಳ ಮನಸ್ಸನ್ನು ಸೆಳೆಯು

ತ್ತಿದ್ದರು. ಇಂಗ್ಲಿಷ್ ಸಾಹಿತ್ಯದ ಬಗ್ಗೆ ತಮಗಿದ್ದ ಒಲವನ್ನು ಹೇಳಿ, ವಿದ್ಯಾರ್ಥಿಗಳಿಗೂ ಆ ಉತ್ಸಾಹವನ್ನು ತುಂಬುತ್ತಿದ್ದರು. ಆಡಂಬರವಿಲ್ಲದೆ. ಕೂಗಾಟವಿಲ್ಲದೆ ಪಾಠ ಹೇಳುತ್ತಿದ್ದರು. ಅವರ ಧ್ವನಿಯಲ್ಲಿಯೇ ಕವಿತೆಯ ಸಾರವನ್ನು ತಿಳಿಸುತ್ತಿದ್ದರು. ಪಾಠ ಮಾಡುವಾಗ, ಭಾವವನ್ನು ವ್ಯಕ್ತಪಡಿಸುವಾಗ ಸಹಜವಾಗಿ ಒಂದುಕಡೆ ವಾಲುತ್ತಿದ್ದರು. ಇಂಗ್ಲಿಷ್ ಪಾಠ ಮಾಡವಾಗ ಕನ್ನಡದ ಶಬ್ದಗಳ ಬಳಕೆಯಿರುತ್ತಿರಲಿಲ್ಲ.

ದೇಶದ ಜನಜೀವನವನ್ನೂ ಆಗಾಗ್ಗೆ ವರ್ಣಿಸುತ್ತಿದ್ದರು. ಹಾಗೆ ಹೇಳುವಾಗ ಸಣ್ಣದನಿಯಲ್ಲಿ ಹಾಡು ಹೇಳುತ್ತಿದ್ದರು. ಯಾವುದೆಂದರೆ —

"ಹುಯ್ಯೋ! ಹುಯ್ಯೋ! ಮಳೆರಾಯ ;
ಹೂವಿನ ತೋಟಕೆ ನೀರಿಲ್ಲ.
ಬಾರೋ! ಬಾರೋ! ಮಳೆರಾಯ ;
ಬಾಳೇತೋಟಕೆ ನೀರಿಲ್ಲ

ಕೇಳಿದವರಿಗೆ ಮೈಮನ ರೋಮಾಂಚನ.

ತರಗತಿಯಲ್ಲಿ ಶ್ರೀಯವರು ಶಿಸ್ತಿನ ಶಿರೋಮಣಿ. ಎ.ಸೀ. ಯವರು ಶ್ರೀಯವರ ಶಿಷ್ಯರು. ಅವರು ಹೇಳುವಂತೆ ಶ್ರೀಯವರು ಬಹು ಕಟ್ಟುನಿಟ್ಟು. ಶ್ರೀಯವರು ಉಪಾಧ್ಯಾಯರಾದಾಗ ಅದ್ಭುತ ಪಾಂಡಿತ್ಯ ಪಡೆದವರೆಂಬ ಪ್ರಖ್ಯಾತಿ. ಅವರಲ್ಲಿ ಸುಳ್ಳು ಪೊಳ್ಳು ಹೇಳಲಾಗದು. ತಲೆಹರಟೆಯ ಶಬ್ದವಿಲ್ಲ. ವಿದ್ಯಾರ್ಥಿಗಳಿಗೆ ಭಯವೋ ಭಯ. ಪರೀಕ್ಷೆಯಲ್ಲಿ ಸೊನ್ನೆ ಹಾಕುವರೆಂಬ ಸುದ್ದಿ. ಅವರ ತರಗತಿಗೆ ಭಯದಿಂದ ತಪ್ಪದೆ ಹೋಗುತ್ತಿದ್ದೆವು.

ಅವರೂ ಬಿಗಿಯಾಗಿಯೇ ಇದ್ದರು. ಅವರು ಧರಿಸಿದ್ದ ಕೋಟು. ರುಮಾಲು ಅಷ್ಟೇ ಬಿಗಿ. ಶ್ರೀಯುವರು ಮಾತನಾಡಲು ನಿಂತರೆ ಸಾಕು ನಿಶ್ಶಬ್ದ. ತರಗತಿಗೆ ಹೇಗೆ ಬರುತ್ತಿದ್ದರೋ ಹಾಗೆಯೇ ಮರಳಿ ಹೋಗುತ್ತಿದ್ದರು. ತರಗತಿಗಂತೂ ಸಮಯಕ್ಕೆ ಸರಿಯಾಗಿ ಹಾಜರು. ಕೆಲಸದಲ್ಲಿ ಅಪಾರ ಶ್ರದ್ಧೆ. ಉದಾಸೀನ ಅನ್ನುವ ಶಬ್ದವೇ ಅವರಿಗೆ ತಿಳಿಯದು.

ವಿದ್ಯಾರ್ಥಿಗಳನ್ನು ಕಂಡರೆ ಶ್ರೀಯುವರಿಗೆ ಬಹಳ ಮಮತೆ. ಶಿಷ್ಯರಲ್ಲಿ ಕಂಡ ಪ್ರತಿಭೆಯನ್ನು ತುಂಬು ಹೃದಯದಲ್ಲಿ ಹೊಗಳುತ್ತಿದ್ದರು. ಅವರಿಗಂತೂ ಪೂರ್ಣ ಪ್ರೋತ್ಸಾಹ. ಶ್ರೀ ಎ. ಎನ್. ಮೂರ್ತಿರಾಯರು ಪ್ರಸಿದ್ಧ ಕನ್ನಡ ಪ್ರಬಂಧಕಾರರು, ಇವರೂ ಶ್ರೀಯುವರ ಶಿಷ್ಯರು. ಶ್ರೀಗಳ ವಿದ್ಯಾರ್ಥಿಯಾಗಿದ್ದಾಗ ಇಂಗ್ಲಿಷಿನಲ್ಲಿ ಪ್ರಬಂಧ ಬರೆದರು. ಗುರುಗಳಿಗೆ ತೋರಿಸಿದರು. ಪ್ರಬಂಧದ ರಚನೆ ನೋಡಿ ಶ್ರೀಯುವರೇ ಬೆರಗಾದರು. ತರಗತಿಗೆ ಪ್ರಬಂಧ ತಂದು ಓದಿ ಹೊಗಳಿದರು. 'ಇದಕ್ಕೂ ಚೆನ್ನಾಗಿ ನನಗೂ ಬರೆಯಲು ಬರುವುದಿಲ್ಲ' ಎಂದು ಹೇಳಿ ಶಿಷ್ಯನನ್ನು ಮೆಚ್ಚಿಕೊಂಡರು.

ರಾಷ್ಟ್ರಕವಿ ಕುವೆಂಪುರವರ ಹೆಸರನ್ನು ಕನ್ನಡನಾಡಿನಲ್ಲಿ ಕೇಳದವರಿಲ್ಲ. ಚಿಕ್ಕಮಕ್ಕಳಿಂದ ಹಿಡಿದು ದೊಡ್ಡವರವರೆಗೆ ಮನೆಮಾತು. ಶ್ರೀಯುವರ ಶಿಷ್ಯರಲ್ಲಿ ಕುವೆಂಪುರವರು ಒಬ್ಬರು. ಕಲ್ಬುರ್ಗಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀಯುವರು ವಹಿಸಿದ್ದರು. ಆ ಸಮಾರಂಭದಲ್ಲಿ ಶ್ರೀಯುವರ 'ಗದಾಯುದ್ಧ' ನಾಟಕವನ್ನು ಅಭಿನಯಿಸಲಾಯಿತು. ಹಾಗೆಯೇ ಕುವೆಂಪುರವರ

'ಯಮನ ಸೋಲು' ನಾಟಕವನ್ನೂ ಅಭಿನಯಿಸಲಾಯಿತು. ಸಭೆ ಮುಗಿಯಿತು. ವೇದಿಕೆಯ ಮೇಲೆ ಶ್ರೀಯವರಿಗೆ ಹೂಹಾರ ನೀಡಿ ಗೌರವಿಸಲಾಯಿತು. ಶ್ರೀಯವರು ವೇದಿಕೆಯ ಬಳಿ ಕುವೆಂಪುರವರನ್ನು ಕರೆಸಿ, ತಮಗೆ ನೀಡಿದ ಹೂವಿನಹಾರವನ್ನು ಅವರಿಗೆ ಹಾಕಿದರು. 'ಈ ಹೂವಮಾಲೆ ಇವರಿಗೇ ಹೆಚ್ಚಾಗಿ ಸಲ್ಲಬೇಕು' ಎಂದು ಹೇಳಿ ಸಂತೋಷಪಟ್ಟರು. ಶಿಷ್ಯವರ್ಗದ ಪ್ರತಿಭೆ ಕಂಡರೆ ಸಾಕು. ಅವರನ್ನು ಬಾಚಿ ತಬ್ಬಿಕೊಂಡು ಹುರಿ ದುಂಬಿಸುತ್ತಿದ್ದರು.

ಶ್ರೀಯವರು ಅಸಿಸ್ಟೆಂಟ್ ಪ್ರೊಫೆಸರ್ ಆಗಿ, ಅನಂತರ ಪ್ರೊಫೆಸರ್ ಆದರು. ಮೈಸೂರು ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಹುದ್ದೆಗೆ ಬಡ್ತಿ. ದಾಖಲೆ ಅಧಿಕಾರಿ ಆಗಿ ದಾಖಲೆ ಸ್ಥಾಪನೆ. ಅದುವರೆಗೂ ಕನ್ನಡ ಎಂ.ಎ. ತರಗತಿಗಳಿರಲಿಲ್ಲ. ಕನ್ನಡ ಬೆಳವಣಿಗೆಗೆ ಕನ್ನಡ ಉಪಾಧ್ಯಾಯರಿಲ್ಲದೆ ಹೇಗಾದೀತು? ಸಾಹಿತ್ಯವನ್ನು ಓದಿದ ವಿದ್ಯಾರ್ಥಿಗಳಿಂದ ಸಾಹಿತ್ಯದ ಆರಾಧನೆ. ಇದನ್ನು ತಿಳಿದು ಕನ್ನಡ ಎಂ.ಎ. ತರಗತಿಗಳನ್ನು ತೆರೆದರು. ಇಂದು ನಾವು ಕಾಣುವ ಕನ್ನಡ ಎಂ.ಎ. ಪದವಿ ಪಡೆದ ಉಪಾಧ್ಯಾಯರುಗಳು ಶ್ರೀಯವರ ಮುಂದಾಲೋಚನೆಯ ಫಲ.

ಶ್ರೀಯವರಿಗೆ, ರಿಜಿಸ್ಟ್ರಾರ್ ಆಗಿದ್ದಾಗಲೂ ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಗಗಳ ಸಂಪರ್ಕವಿತ್ತು. ವಿದ್ಯಾರ್ಥಿಗಳನ್ನು ಕರೆಸುತ್ತಿದ್ದರು. "ಅಧ್ಯಯನ ಗೋಷ್ಠಿ"ಗಳನ್ನು ಮೈಸೂರಿನಲ್ಲಿ ಮೊದಲು ರಚಿಸಿದರು. ಕನ್ನಡ ಭಾಷಾ ಚರಿತ್ರೆ, ಕನ್ನಡ-ದ್ರಾವಿಡ ಛಂದಸ್ಸು, ಇದರ ಬಗೆಗೆ ವಿದ್ಯಾರ್ಥಿಗಳ ಮನಸ್ಸು

ತೆರೆಯುವ ಹಾಗೆ. ಖಾಸಗಿಯಾಗಿ ಉಪನ್ಯಾಸ ನೀಡುತ್ತಿದ್ದರು. ಅವರ ಸ್ಫೂರ್ತಿಯಿಂದ ಬೆಳೆದವರು, ಮಾರ್ಗದರ್ಶನ ಪಡೆದವರು ಮುಂದೆ ಪ್ರಸಿದ್ಧರಾದರು.

ವಿಶ್ವವಿದ್ಯಾನಿಲಯ ಹಲವಾರು ಪ್ರಕಟನೆಗಳನ್ನು ಹೊರ ತರುತ್ತಿದೆ. ಕಥೆ, ಕವನ, ಸಾಹಿತ್ಯ, ನಾಟಕ, ವಿಮರ್ಶೆ, ಮುಂತಾದ ಪ್ರಕಟನೆಗಳು ಆಗಾಗ್ಯೆ ಆಗುತ್ತಿರುತ್ತವೆ. ಸಾಮಾನ್ಯ ಜನರಿಗೆ ಇದರ ಉಪಯೋಗವೆಂತಾಗಬೇಕು. ಅದರಿಂದ ಶ್ರೀ ಯವರು "ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಮಾಲೆ"ಯನ್ನು ಸ್ಥಾಪಿಸಿದರು. ಅದರ ಸಂಪಾದಕ, ಹೇಳಲೇಬೇಕಾಗಿಲ್ಲ, ಶ್ರೀ ಯವರೇ. ತನ್ನ ಕೆಲಸದ ಜೊತೆಗೆ ಮತ್ತೊಂದು ಕೆಲಸ. ವಿದ್ಯಾರ್ಥಿಗಳಿಗೆ ಮತ್ತು ಜನಸಾಮಾನ್ಯರಿಗೆ ಪ್ರಾಚೀನ ಸಾಹಿತ್ಯ ವನ್ನು ಪರಿಚಯಿಸಿದರು. ಈಗಿನ ಕಾಲಕ್ಕೆ ಬೇಕಾದ ಜ್ಞಾನ ಮತ್ತು ವಿಜ್ಞಾನಗಳಿಗೆ ಸಂಬಂಧಪಟ್ಟ ಸಾಹಿತ್ಯವನ್ನು ಬರೆಸಿ, ಪ್ರಕಟಿಸಿ, ಅನುಕೂಲಮಾಡಿದರು. ನಿರಂತರವಾಗಿ ದುಡಿಯು ತ್ತಿದ್ದ ಈ ಜೀವಿ 1942ರಲ್ಲಿ ಕೆಲಸದಿಂದ ನಿವೃತ್ತಿಗೊಂಡರು.

ಶ್ರೀಯವರು ಯೌವನದಿಂದ ಒಂದಲ್ಲ ಒಂದು ದುಃಖ ಅನುಭವಿಸಿ ಅರುವತ್ತು ವರ್ಷ ಕಳೆದರು. ಚಿಕ್ಕವಯಸ್ಸಿನಲ್ಲಿಯೇ ಪತ್ನಿಯನ್ನು ಕಳೆದುಕೊಂಡ ನೋವು. ಬಂಧುಗಳ ಬಲವಂತಕ್ಕೆ ಮತ್ತೆ ಮದುವೆಯಾಗದೆ ನಿಷ್ಠೆಯಿಂದ ಬಾಳಿದರು. ತನ್ನ ಒಬ್ಬನೇ ಮಗ ಚಿಕ್ಕವನಾಗಿದ್ದಾಗಲೇ ಕಣ್ಣು ಕಳೆದುಕೊಂಡ. ಅನಂತರ ತನ್ನ ಮಗಳು ಚಿಕ್ಕವಯಸ್ಸಿನಲ್ಲಿಯೇ ವಿಧವೆಯಾದಳು. ಈ ಎಲ್ಲಾ ನೋವು ಬೆಟ್ಟದಷ್ಟು. ಶ್ರೀಯವರು ತಮ್ಮ ದುಃಖವನ್ನು

ನುಂಗಿಕೊಂಡರು. ಅಚಲರಾದರು. ತಮ್ಮ ದಿವ್ಯ ಶಕ್ತಿ ಕನ್ನಡಮ್ಮನ ಸೇವೆಗೆಂದರು. ಮುಪ್ಪಿನಲ್ಲಿ ವಿಶ್ರಾಂತರಾಗಬೇಕಾದ ಕಾಲ. ವಿಶ್ರಾಂತಿ ತೊರೆದರು. ಕಾರ್ಯವನ್ನು ಕೈಕೊಂಡರು. ಕನ್ನಡದ ಸೇವೆಗೆ ಮುಂದಾದರು.

ಶ್ರೀಯವರು ನಿವೃತ್ತರಾದ ಮೇಲೆ ಹಿತವಾದ ಆವರಣ ದೊರೆಯದೆ ಬೆಂಗಳೂರಿಗೆ ಬಂದರು. ಇಲ್ಲಿಯವರು ತೋರಿಸಿದ ಗೌರವ ಸಂತೋಷದಾಯಕವಾಗಿತ್ತು. ಧಾರವಾಡದಲ್ಲಿ ಆಗ ತಾನೇ ಕರ್ಣಾಟಕ ಎಜುಕೇಶನ್ ಬೋರ್ಡ್ ಆರ್ಟ್ಸ್ ಕಾಲೇಜು ಪ್ರಾರಂಭವಾಗಿತ್ತು. ಅದರ ಕಾರ್ಯದರ್ಶಿ ಬೆಂಗಳೂರಿಗೆ ಬಂದರು. ಶ್ರೀಯವರನ್ನು ಭೇಟಿ ಮಾಡಿ ತಮ್ಮ ಕಾಲೇಜಿಗೆ ಆಹ್ವಾನಿಸಿದರು. "ನೀವು ಪ್ರಿನ್ಸಿಪಾಲ್ ಆಗಿದ್ದರೆ ಅದೇ ಕಾಲೇಜಿಗೆ ದೊಡ್ಡ ಗೌರವ, ಹಿರಿಮೆ" ಎಂದರು. ವಾತ್ಸಲ್ಯದ ಬಲವಂತಕ್ಕೆ ಒಪ್ಪಿದರು.

ಧಾರವಾಡಕ್ಕೆ ಶ್ರೀಯವರು ಹೋಗುವುದು ಕೆಲವರಿಗೆ ಸಂತೋಷವಿರಲಿಲ್ಲ. ಇದು ಬೆಂಗಳೂರಲ್ಲಿ ಅವರೊಡನೆ ಇದ್ದ ಮಿತ್ರರ ಭಾವನೆ. ಬಂಧುಗಳು ವಿನಂತಿಸಿದರು: "ಈ ವಯಸ್ಸಿನಲ್ಲಿ ಧಾರವಾಡಕ್ಕೆ ಹೋಗುವುದು ಸರಿಯೆ?" ಎಲ್ಲರಿಗೂ ನೇರ ಉತ್ತರ : "ಕನ್ನಡ ಸೇವೆಗೆ ಈ ಜೀವ ಮುಡಿಪು." ಆ ಸೇವೆ ಬೆಂಗಳೂರಲ್ಲಿ ಆದರೇನು ? ಧಾರವಾಡದಲ್ಲಿ ಆದರೇನು ? ಈ ದೇಹ ಕನ್ನಡನಾಡಿನಲ್ಲಿ ಎಲ್ಲಿ ಬಿದ್ದರೇನು ? ಎಲ್ಲಾ ಕನ್ನಡ ಮಣ್ಣೆ." ಎಂಥ ನಾಡಭಕ್ತಿ !

ಶ್ರೀಯವರು ಆಗಿನ ದಿವಾನರಾಗಿದ್ದ ಮಿರ್ಜಾ ಸಾಹೇಬರಲ್ಲಿ

ಕವನ್ನು ಅಭಿಪ್ರಾಯ ಹೇಳಿದ್ದರು: "ವಿದ್ಯಾ ಇಲಾಖೆಯ ಮುಖ್ಯ ನಿರ್ದೇಶಕರಾಗಲು ಸಾಧ್ಯವಾದರೆ ನನಗೆ ಸಂತೋಷ." ವಿದ್ಯಾ ಇಲಾಖೆಯಲ್ಲಿ ಕನ್ನಡ ಶ್ರದ್ಧೆ. ಅದಕ್ಕೆ ಸರಿಯಾದ ಪಾಠಕ್ರಮ ಅಳವಡಿಸುವುದು : ಇದರಿಂದ ಪುಸ್ತಕ ಪ್ರಪಂಚ ಬೆಳೆದು ಹೊಸ ಸಾಹಿತ್ಯ ನಯವಾಗಿ ಬೆಳೆಯಲಿ, ಎಂಬುದು ಇವರ ಇಚ್ಛೆ. ಅದು ಈಡೇರದಿದ್ದುದೇ ವ್ಯಥೆ. ಶ್ರೀಯವರು ಧಾರವಾಡಕ್ಕೆ ಹೋಗಲು ಒಪ್ಪಿದ್ದು ಮತ್ತೊಂದು ಉದ್ದೇಶದಿಂದ: ಬೊಂಬಾಯಿ, ಪೂನಾಗಳ ಪ್ರಭಾವದಲ್ಲಿದ್ದ ಕನ್ನಡ ವಿದ್ಯಾರ್ಥಿಗಳನ್ನು ಆಕರ್ಷಿಸುವುದು. ಕನ್ನಡ ಸಾಹಿತ್ಯ, ವಿಮರ್ಶೆ, ಪಾಠ ಪ್ರವಚನ ಇವನ್ನು ಬೆಳೆಸುವ ಆಲೋಚನೆ. ಧಾರವಾಡ ಕೇಂದ್ರಮಾಡಿ ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ ಕನ್ನಡ ಸಂಸ್ಕೃತಿ, ಸಾಹಿತ್ಯ ಹರಡಲು ಇಚ್ಛೆ. ಇದೇ ನಿಜಕ್ಕೂ ಬಲವಾದ ಪ್ರೇರಣೆ. ರಕ್ತದಲ್ಲಿ ಸಕ್ಕರೆ ವ್ಯಾಧಿ ಅವರಿಗೆ. ಒಮ್ಮೊಮ್ಮೆ ತಲೆಸುತ್ತಿ ಕೆಳಕ್ಕೆ ಬಿದ್ದುಬಿಡುತ್ತಿದ್ದರು. ಇದನ್ನು ನೋಡಿ ಬಂಧುಗಳು ಧಾರವಾಡಕ್ಕೆ ಹೋಗಕೂಡದೆಂದು ಹೇಳಿದ್ದರು. ಸ್ನೇಹಿತರು ಶ್ರೀಯವರಿಂದ ಕನ್ನಡಕ್ಕೆ ಮತ್ತಷ್ಟು ಸೇವೆ ನಿರೀಕ್ಷಿಸಿದ್ದರು. ಯಾರ ಮಾತಿಗೂ ಜಗ್ಗಲಿಲ್ಲ. ಹಲವಾರು ಉದ್ದೇಶವಿಟ್ಟುಕೊಂಡು ಧಾರವಾಡಕ್ಕೆ ಹೊರಟರು. ಇದಕ್ಕೆಲ್ಲ ಕಾಲ ಬೇಕಲ್ಲವೆ. ಕಾಲ ದೊರೆಯಲಿಲ್ಲ. ಬರೆದ ಲೇಖನಗಳು ಪ್ರಕಟವಾಗಲಿಲ್ಲ. ಧಾರವಾಡದಲ್ಲಿ ಕಣ್ಮರೆಯಾದವು. ಕನ್ನಡಿಗರಿಗಾದ ನಷ್ಟ ಹೇಳತೀರದು. ಕನ್ನಡಿಗರನ್ನು ಬೇಗ ಅನಾಥರನ್ನಾಗಿ ಮಾಡಿದರು. ಇಹಲೋಕ ತ್ಯಜಿಸಿದರು.

29ನೆಯ ಕನ್ನಡ ಸಾಹಿತ್ಯ ಸಮ್ಮೇಳನ ಮದರಾಸಿನಲ್ಲಿ. ಟಿ. ಪಿ. ಕೈಲಾಸಂ ಅಧ್ಯಕ್ಷರು. ಡಿಸೆಂಬರ್ 26 ಬೆಳಗ್ಗೆ

ಸಮಾರಂಭ. ಕನ್ನಡ ಬಾವುಟದ ಆರೋಹಣ. ಟಿ. ಪಿ. ಕೈಲಾಸಂ ರವರಿಂದ. ಆರೋಹಣ ಮಾಡುವಾಗ ಬಾವುಟಕ್ಕೆ ಕಟ್ಟಿದ್ದ ಹಗ್ಗ ಹಿಡಿದೆಳೆದರು. ಬಾವುಟ ಹಾರಲಿಲ್ಲ. ಹಗ್ಗ ಮಧ್ಯ ದಲ್ಲಿಯೇ ಕಿತ್ತು ಹೋಯಿತು. ಎಲ್ಲರಿಗೂ ಭೀತಿ. ಕನ್ನಡನಾಡಿಗೆ ಇಂದು ಏನೋ ವಿಪತ್ತು ಕಾದಿದೆ ಎಂದು. ಸಮ್ಮೇಳನ ಮುಗಿಯಿತು. ಒಂದು ವಾರ ಕಳೆದಿಲ್ಲ. ಮಹಾಸೇನಾನಿ ಬಿ. ಎಂ. ಶ್ರೀ. 1946 ಜನವರಿ ಐದರಂದು ಧಾರವಾಡದಲ್ಲಿ ಇಹಲೋಕ ತ್ಯಜಿಸಿದರು. ಅವರ ವಾಣಿ ನಿಜವಾಯಿತು. ಕನ್ನಡ ಸೇವೆಗೆ ಮುಡಿಪಾದ ದೇಹ ಧಾರವಾಡದಲ್ಲಿ ಬಿದ್ದರೇನು? ಅದೂ ಕನ್ನಡದ ಮಣ್ಣೇ ತಾನೆ.

ಬಿ. ಎಂ. ಶ್ರೀಯವರ ನಾಡು ನುಡಿಗಳ ಸೇವೆಯನ್ನು ಈ ಪತ್ರದಲ್ಲಿ ಬರೆದಿದ್ದೇನೆ. ಪತ್ರ ಸ್ವಲ್ಪ ಉದ್ದವೇ ಆಯಿತು. ಬೇಸರ ಇಲ್ಲ ತಾನೆ? ಇನ್ನೂ ಏನಾದರೂ ವಿಷಯ ತಿಳಿಯ ಬೇಕಾದರೆ ಕೇಳು. ನೀನು ನನಗೆ ಕೇಳಿದಷ್ಟು ಬರೆಯುತ್ತೇನೆ. ನಿನ್ನ ಕ್ಷೇಮಸಮಾಚಾರಕ್ಕೆ ಕಾಗದ ಬರೆಯುವುದು.

ಇತಿ ನಿನ್ನ ಪ್ರೀತಿಯ ಅಪ್ಪಾಜಿ
ಹೋ. ಶ್ರೀ.

ಪತ್ರ—5

ದಿನಾಂಕ 20, ನವೆಂಬರ್
ಮೈಸೂರು

ಪ್ರೀತಿಯ ಅಪ್ಪಾಜಿ,

ನಿಮ್ಮ ಕಾಗದ ಓದಿ ತುಂಬಾ ಸಂತೋಷವಾಯಿತು. ಬಿ. ಎಂ. ಶ್ರೀಯವರ ಸಾಹಿತ್ಯದ ಎಲ್ಲ ವಿವರಗಳನ್ನು ತಿಳಿಸಿದ್ದೀರಿ. ಕನ್ನಡ ಸಾಹಿತ್ಯಕ್ಕೆ ಶ್ರೀಯವರ ಸೇವೆ ಅಮೋಘ. ಅಬ್ಬಾ! ಮೈ ಜುಮ್ಮೆಂದಿತು. ನಿಜಕ್ಕೂ ಅವರು ತಪಸ್ವಿಯೇ ಸರಿ. ಈ ಮಹಾನುಭಾವ ನಿಮ್ಮಂತೆ ಇದ್ದಾಗ ಇಷ್ಟೊಂದು ಸಾಹಿತ್ಯ ಕೃತಿ ರಚಿಸಿದ್ದಾರೆ. ಕನ್ನಡ ನುಡಿ ಸೇವೆ ಮಾಡಿದ್ದಾರೆ. ನನ್ನ ಹಾಗೆ ಬಾಲ್ಯದಲ್ಲಿದ್ದಾಗ ಹೇಗಿದ್ದರು? ಅವರ ಹವ್ಯಾಸವೇನು? ಮೊದಲಿನಿಂದಲೂ ಬರವಣಿಗೆಯ ಆಸಕ್ತಿ ಇತ್ತಾ? ಇದನ್ನು ತಿಳಿಯುವ ಆಸೆ. ಅವರ ಹೆಸರು ಬಿ. ಎಂ. ಶ್ರೀಕಂಠಯ್ಯ. ಬಿ. ಮತ್ತು ಎಂ. ಅಂದರೆ ಏನು? ಎಲ್ಲಿ ಹುಟ್ಟಿದರು? ಬೆಳೆದದ್ದು ಎಲ್ಲಿ? ಓದಿದ್ದು ಎಲ್ಲಿ? ಕವಿತೆ, ನಾಟಕ ಬರೆಯುವುದು ಇವರಿಗೆ ಹೇಗೆ ಬಂತು? ಈ ವಿಚಾರ ತಿಳಿಸಿ. ಅಮ್ಮನಿಗೆ ನಮಸ್ಕಾರ ತಿಳಿಸಿ.

ನಿಮ್ಮ ಪ್ರೀತಿಯ
ಶಶಿ.

ಪತ್ರ—6

ದಿನಾಂಕ 25, ನವೆಂಬರ್
ಬೆಂಗಳೂರು

ಪ್ರೀತಿಯ ಶಶಿ,

ನಿನ್ನ ಕಾಗದ ತಲುಪಿತು. ಶ್ರೀಯವರು ಬಾಲ್ಯ ಹೇಗೆ ಕಳೆದರು ? ಎಂದು ಕೇಳಿರುವೆ. ತುಂಬಾ ಸಂತೋಷ.

ಶ್ರೀಯವರ ಹಿರಿಯರು ಬಾಳಿ ಬದುಕಿದ ಊರು ಬೆಳ್ಳೂರು. ಈಗಿನ ಮಂಡ್ಯ ಜಿಲ್ಲೆ. ನಾಗಮಂಗಲ ತಾಲ್ಲೂಕಿಗೆ ಮಳೆ ಕಡಿಮೆ ಆದರೂ, ಸಾಹಿತ್ಯ ಮತ್ತು ಕಲೆಗಾರರಿಗೆ ಹೆಸರಾದ ತಾಲ್ಲೋಕು. ಬೆಳ್ಳೂರಿಗೆ ಸಮೀಪದಲ್ಲಿಯೇ ಸುಪ್ರಸಿದ್ಧ ಕ್ಷೇತ್ರ ಆದಿಚುಂಚನಗಿರಿ ಇದೆ. ಜಗದ್ಗುರು ಶ್ರೀಶ್ರೀಶ್ರೀ ಬಾಲಗಂಗಾಧರ ನಾಥ ಸ್ವಾಮಿಯವರನ್ನು ನೋಡಿದ್ದೀರಲ್ಲಾ. ಅವರ, ಇವರ ಕ್ಷೇತ್ರ ಅದು ಶ್ರೀಯವರ ತಂದೆ ಮೈಲಾರಯ್ಯ. ತಾಯಿ ಭಾಗೀರಥಮ್ಮ ತಾಯಿಯ ತವರೂರು ಸಂಪಿಗೆ, ತುಮಕೂರು ಜಿಲ್ಲೆ. ಅಲ್ಲಿ ಬಿ. ಎಂ. ಶ್ರೀ. ಜನನ· 1884 ಜನವರಿ 3 ರಂದು. ಮಾಸ್ತಿಯವರು ಶ್ರೀಯವರ ಬಗ್ಗೆ ರಚಿಸಿದ ಕವನದ ಸಾಲು—

"ಬೆಳ್ಳೂರ ಮೈಲಾರ ಶ್ರೀಕಂಠ ಗುರುವರ" ಎಷ್ಟು ಸಮಂಜಸ! ಅರ್ಥಗರ್ಭಿತ! ಲೋಕರೂಢಿಯಂತೆ ಇವರೂ ಸಹ ಹೆಸರಿನ ಮುಂದೆ ಸಂಕೇತಗಳನ್ನು ಬಳಸಿದ್ದಾರೆ. ಬಿ. ಅಂದರೆ ಬೆಳ್ಳೂರು. ಎಂ. ಅಂದರೆ ಮೈಲಾರಯ್ಯ, ತಂದೆ. ಶ್ರೀ ಅಂದರೆ ಶ್ರೀಕಂಠಯ್ಯ. 'ಶ್ರೀ' ಎಂದೇ ಪ್ರಖ್ಯಾತಿ. ನಿಜಕ್ಕೂ ಕನ್ನಡದ ಸಿರಿ. ಶ್ರೀಯವರೇ ಹಿರಿಯ ಮಗ. ಇಬ್ಬರು ತಮ್ಮಂದಿರು, ಕೃಷ್ಣಸ್ವಾಮಿ ಮತ್ತು ಶಿವರಾಮಯ್ಯ. ಹಾಗೂ ಇಬ್ಬರು ತಂಗಿಯರು; ಕಾವೇರಮ್ಮ ಮತ್ತು ನಂಜಮ್ಮ.

ತಂದೆ ಮೈಲಾರಯ್ಯ ಬುದ್ಧಿವಂತರು. ಶ್ರದ್ಧಾವಂತರು, ನಿಷ್ಠಾವಂತರು. ಸತತ ದುಡಿಮೆ ಮಾಡಿಕೊಂಡು ಕಾನೂನು ಅಭ್ಯಾಸ ಮಾಡಿದರು. ಪರೀಕ್ಷೆಯಲ್ಲಿ ಉತ್ತೀರ್ಣರಾದರು. ವಕೀಲರಾಗಿ ಶ್ರೀರಂಗಪಟ್ಟಣದಲ್ಲಿ ನೆಲಸಿದರು. ಶ್ರೀಯವರ ಬಾಲ್ಯಜೀವನ, ಪ್ರಾಥಮಿಕ, ಮಾಧ್ಯಮಿಕ ಶಾಲೆಯ ವಿದ್ಯಾಭ್ಯಾಸ ಶ್ರೀರಂಗಪಟ್ಟಣದಲ್ಲಿ.

ನೋಡಮ್ಮ, ನಿನಗೆ ಶ್ರೀರಂಗಪಟ್ಟಣ ಚೆನ್ನಾಗಿ ಗೊತ್ತಿದೆ. ಮೈಸೂರಿನಿಂದ ಕೇವಲ ಹದಿನೈದು ಕಿ.ಮಿ. ಪುಣ್ಯಕ್ಷೇತ್ರ. 'ಮೈಸೂರಿನ ಹುಲಿ' ಎಂದೇ ಪ್ರಸಿದ್ಧನಾಗಿದ್ದ ಟಿಪ್ಪುವಿನ ರಾಜಧಾನಿ. ಶ್ರೀರಂಗಪಟ್ಟಣ ಹಿರಿಮೆ ಪಡೆದ ಕ್ಷೇತ್ರ. ಕಾವೇರಿ ನದಿ ಸುತ್ತಲೂ ಬಳಸಿದೆ. ಒಳ್ಳೆಯ ಹವಾಗುಣ. ತಂಪಾದ ಸೊಂಪಾದ ಸ್ಥಳ. ಇಂತಹ ಕ್ಷೇತ್ರದಲ್ಲಿ ಕವಿ ಶ್ರೀಯವರು ಬಾಲ್ಯ ಕಳೆದರು.

ಶ್ರೀಕಂಠನೆಂದು ಬಾಲ್ಯದಲ್ಲಿ ಕೂಗುತ್ತಿದ್ದರು. ಶ್ರೀಕಂಠ ಬಾಲ್ಯದಲ್ಲಿ ಆಟ ಪಾಟಗಳಲ್ಲಿ ಮುಂದು. ಓದುವುದರ ಕಡೆ

ಉತ್ಸುಕತೆ ಅಪ್ಪಕ್ಕಪ್ಟೆ. ಶ್ರೀರಂಗಪಟ್ಟಣದ ಕೋಟೆ. ಕೊತ್ತಲ, ಕಂದಕಗಳಲ್ಲಿ ಓಡಾಟ. ಸಂಗಡಿಗರ ಜೊತೆ ಅಲೆದಾಟ. ಕಣ್ಣಿಗೆ ಬಿದ್ದ ತೋಟಗಳಿಗೆ ಹಾಜರು. ಮಾವು, ಸೀಬೆ, ಹಲಸು ಇವರ ಪಾಲು. ಮರಗಳ ಮೇಲೆಯೇ ಆಟ. ಮರಕೋತಿ ಆಟ ಕೇಳಿಲ್ವೆ. ನೀನೂ ಆಡ್ತೀಯಲ್ಲಾ. ಬೇಡ ಅಂದರೂ ಕೋತಿಯ ತರಹ ಜೋತುಬಿದ್ದು ಮರದಿಂದ ಮರಕ್ಕೆ ಜಿಗಿತ. ಊಟದ ಚಿಂತೆಯೇ ಇಲ್ಲ. ಹಸಿವಾದರೆ ಹಣ್ಣು ಹಂಪಲು, ಊಟದ ಅವಶ್ಯಕತೆ ಏಕೆ. ಅಲೆದಲೆದು ಹೊತ್ತುಮೀರಿ ಮನೆಗೆ. ತಂದೆ ಯಿಂದ ಬೈಗುಳ. ಹೊಡೆತ. ಎಲ್ಲಕ್ಕೂ ಸಿದ್ಧ ಈ ತುಂಟ.

ಶ್ರೀರಂಗಪಟ್ಟಣದ ಸುತ್ತಲೂ ಹರಿಯುತ್ತಿದೆ ಕಾವೇರಿ ನದಿ. ಅದನ್ನು ದ್ವೀಪವನ್ನಾಗಿ ಮಾಡಿದೆ. ತುಂಟ ಶ್ರೀಕಂಠನಿಗೆ ಕಾಲ ಕಳೆಯಲು ಇದೂ ಒಂದು ಅವಕಾಶ. ಈಜುವುದರಲ್ಲಿ ಚತುರ. ನೀರಿಗಿಳಿದರೆ ಸಾಕು, ಮನೆ ಮಠ, ಆಹಾರ, ನಿದ್ರೆ ಯಾವುದೂ ಬೇಕಿಲ್ಲ. ಸಂಗಡಿಗರ ಜೊತೆ ಹೊರಟನೆಂದರೆ ಮುಗಿಯಿತು. ನದಿಗೆ ಜಿಗಿದು ಗಂಟೆಗಟ್ಟಲೆ ಈಜಾಟ ; ಮನಸ್ಸಿಗೆ ಸಂತೋಷವಾಗುವ ತನಕ ; ದೇಹಕ್ಕೆ ಆಯಾಸವಾಗು ವವರೆಗೆ ; ಮನೆಗೆ ಬರುವಾಗ ಭಯ. ತಂದೆಯಿಂದ ಶಿಕ್ಷೆ ತಪ್ಪಿದ್ದಲ್ಲ. ಆದರೂ ತನ್ನ ಚಟುವಟಿಕೆ ಬಿಡಲೊಲ್ಲ.

ಶ್ರೀರಂಗಪಟ್ಟಣದ ಶ್ರೀರಂಗನಾಥಸ್ವಾಮಿ ದೇವಾಲಯ ಪ್ರಸಿದ್ಧ. ದೇವಸ್ಥಾನ ಸುಂದರ. ಗೋಪುರವಂತೂ ಆಕರ್ಷಕ. ಮಲಗಿರುವ ರಂಗನಾಥನ ಭವ್ಯಮೂರ್ತಿ ಎಂತಹವರನ್ನೂ ಆಕರ್ಷಿಸುತ್ತದೆ. ವರ್ಷಕ್ಕೊಮ್ಮೆ ರಥೋತ್ಸವ. ಶ್ರೀಕಂಠ

ದೈವಭಕ್ತ. ರಥೋತ್ಸವ ಪರಿಷೆ ಅಂದರೆ ಸಾಕು, ಅಲ್ಲಿ ಶ್ರೀಕಂಠನ ಹಾಜರು. ರಥ ದೊಡ್ಡದು. ಗಟ್ಟಿ ಮರದಿಂದ ಮಾಡಿದೆ. ತುಂಬಾ ಭಾರ. ಆನೆ ಕಟ್ಟಿ ಎಳೆಸಿದರೂ ಅಲುಗಾಡದು. ಒಬ್ಬರಿಂದ ಸಾಧ್ಯವೆ ? ರಥೋತ್ಸಕ್ಕೆ ಬಂದ ಸಾವಿರಾರು ಮಂದಿ ಎಳೆದರೆ ಅಲುಗೀತು. ಶ್ರೀಕಂಠ ಪಂಚೆ ಎತ್ತಿಕಟ್ಟಿ ತಾನೂ ಎಳೆಯುತ್ತಿದ್ದ. ರಥ ಮುಂದಕ್ಕೆ ಸಾಗಿತು. ಎಲ್ಲರೂ ಜೈಕಾರ ಹಾಕಿದರು, "ಗೋವಿಂದಾ, ಗೋವಿಂದಾ" ಎಂದರು, ಉತ್ಸವ ಮುಗಿಯಿತು. ರಾತ್ರಿಯಾಯಿತು, ಶ್ರೀಕಂಠ ಮಾತ್ರ ಇನ್ನೂ ಅಲ್ಲಿಯೇ. ದೇವಾಸ್ಥಾನದ ಬಾಗಿಲು ಮುಚ್ಚಿತು. ಅನಂತರ ಮನೆಗೆ. ತಂದೆಯಿಂದ ಬೈಗುಳ, ಮೈ ಮುರಿಯ ಏಟು.

ಶ್ರೀಕಂಠ ಎಲ್ಲ ಉತ್ಸವದಲ್ಲೂ ಹಾಜರು. ಗಂಗಾಧರ ಸ್ವಾಮಿ ಉತ್ಸವದಲ್ಲಿ ಅನ್ನದಾನ ಉಂಟು. ಉತ್ಸವ ಜಾತ್ರೆ ಗಳೆಂದರೆ ಪಾನಕ ಕೋಸಂಬರಿ ನೀರುಮಜ್ಜಿಗೆ, ಇದ್ದೇ ಇರುತ್ತೆ. ಇದಕ್ಕಾಗಿ ನೀರು ತರಲು ಕಾವೇರಿ ನದಿಗೆ ನೂರಾರು, ಸಾವಿರಾರು ಮಂದಿ. ಶ್ರೀಕಂಠನು ಸುಮ್ಮನಿರುವನೇ. ತಂದೆಯುವರ ಪಂಚೆಯನ್ನೇ ಸಿಂಬಿ ಮಾಡಿ, ಆಳುದ್ದದ ಬಿದಿರು ದಬ್ಬೆಯ ಎರಡು ತುದಿಗಳಿಗೂ ತಕ್ಕಡಿಯ ತಟ್ಟೆಗಳಂತೆ ಹಗ್ಗ ಕಟ್ಟಿ ತೂಗುಬಿಟ್ಟ. ಸಿಂಬಿಯ ಮೇಲೆ ಎರಡು ಬಿಂದಿಗೆಗಳನ್ನು ಇಟ್ಟು, ಕಾವಡಿ ಹೊತ್ತ ರೀತಿ ಅಡ್ಡ ಹೊತ್ತು, ದೊಡ್ಡ ದೊಡ್ಡ ಕಡಾಯಿಗಳಿಗೆ ನೀರು ತುಂಬಿಸಿದ ; ಸ್ವಯಂ ಸೇವಕರಂತೆ ಈ ಎಲ್ಲಾ ಕೆಲಸಗಳಲ್ಲಿ ನೆರವಾಗುತ್ತಿದ್ದ. ಪ್ರಾಥಮಿಕ, ಮತ್ತು ಮಾಧ್ಯಮಿಕ ಶಾಲೆ ಓದುವಾಗ ಈ ರೀತಿಯ ಚಟುವಟಿಕೆ ಶ್ರೀಕಂಠನದು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ತೇರ್ಗಡೆ.

ಅಂದರೆ ಈಗಿನ 7ನೇ ತರಗತಿ. ಪ್ರೌಢಶಾಲೆ ಶ್ರೀರಂಗಪಟ್ಟಣದಲ್ಲಿ ಇರಲಿಲ್ಲ. ಮೈಸೂರಿಗೆ ಹೋಗಬೇಕಾಗಿತ್ತು.

ಶ್ರೀರಂಗಪಟ್ಟಣದಿಂದ ಪ್ರೌಢ ವಿದ್ಯಾಭ್ಯಾಸಕ್ಕೆ ಮೈಸೂರಿಗೆ, ಈಗ ಹತ್ತು ನಿಮಿಷಕ್ಕೆಲ್ಲ ಹೋಗುವ ಅನುಕೂಲವಿದೆ. ಆಗ ಪ್ರಯಾಣ ಸೌಕರ್ಯ ಇರಲಿಲ್ಲ. ಮೋಟಾರು, ಕಾರು, ಇನ್ನೂ ಬಂದಿರಲಿಲ್ಲ. ಬಸ್ಸು ಓಡಾಡುತ್ತಿರಲಿಲ್ಲ. ಶ್ರೀಮಂತರ ಬಳಿ ಮಾತ್ರ ಸಾರೋಟು ಗಾಡಿ, ಜೋಡೆತ್ತಿನ ಪೆಟ್ಟಿಗೆ ಗಾಡಿ. ತಂದೆ ಮೈಲಾರಯ್ಯನವರು ಮಗನ ವಿದ್ಯಾಭ್ಯಾಸಕ್ಕೆ ಜೋಡೆತ್ತಿನ ಗಾಡಿ ವ್ಯವಸ್ಥೆಮಾಡಿ ಮೈಸೂರಿಗೆ ಕಳಿಸಿದರು. ಶ್ರೀಕಂಠನ ಜೊತೆ ತಮ್ಮಂದಿರೂ ಸಹ ಹೋಗುತ್ತಿದ್ದರು.

ಮೈಸೂರು ಮಹಾರಾಜ ಕಾಲೇಜಿನಲ್ಲಿ ಎಫ್.ಎ. ತರಗತಿ ಓದಿ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಬಿ.ಎ. ತರಗತಿಗೆ ಸೇರಿದ. ಪ್ರಸಿದ್ಧ ಶಿಕ್ಷಣತಜ್ಞ ಟೇಯ್ಟ್ ಸಾಹೇಬರ ವಿದ್ಯಾರ್ಥಿಯಾಗಿ ಪದವಿ ಪಡೆದ. ಮದರಾಸಿನಲ್ಲಿ ಬಿ.ಎಲ್. ಪದವಿ ಪಡೆದು, ಅನಂತರ ಎಂ.ಎ ಪದವಿ ಪಡೆದು ಮೈಸೂರಿಗೆ ಹಿಂದಿರುಗಿದ. ಕನ್ನಡದ ಮೇಲಿನ ಮಮತೆ ತಾರುಣ್ಯದಲ್ಲಿಯೇ ಮೂಡಿತು.

ಮದರಾಸಿನಲ್ಲಿ ಸಾಹಿತ್ಯದ ಪ್ರೌಢ ವ್ಯಾಸಂಗ. ವಿದ್ಯಾರ್ಥಿಗಳು ಕಡಲದಂಡೆಯಲ್ಲಿ ಹಾಯಾಗಿ ಹರಟೆ ಹೊಡೆದು ಅಡ್ಡಾಡುತ್ತಿದ್ದರು. ಶ್ರೀಕಂಠ ಸ್ನೇಹಿತರ ಜೊತೆ ಹರಟೆ ಹೊಡೆಯದೆ, ಕನ್ನಡದ ಬಗ್ಗೆ ಚಿಂತಿಸುತ್ತಿದ್ದರು. ಅಲ್ಲಿಯೂ, "ಇಂಗ್ಲಿಷ್ ಸಾಹಿತ್ಯದಲ್ಲಿರುವ ಅರ್ಥಸಂಪತ್ತು ಕನ್ನಡದಲ್ಲಿ ಬರುವುದು

ಎಂದಿಗೆ. ಕನ್ನಡ ಸಾಹಿತ್ಯದ ಕಸಿ ಹೇಗೆ ? ಇಂಗ್ಲಿಷ್ ಸಂಪರ್ಕ ದಿಂದ ಬೆಳೆಸುವುದು ಹೇಗೆ ?" ಇದು ಅವರು ಸಮುದ್ರ ದಡದಲ್ಲಿ ಆಲೋಚಿಸುತ್ತಿದ್ದ ವಿಷಯ. ಇವರದು ಚುರುಕಾದ ಆಲೋಚನೆ, ಪಕ್ವವಾದ ತಿಳಿವಳಿಕೆ.

ಶ್ರೀಯವರು ಮೊದಲು ಕಲಿತದ್ದು ಭೌತಶಾಸ್ತ್ರ. ಅಭ್ಯಾಸ ಮಾಡಿದ್ದು ಆಂಗ್ಲಭಾಷೆ ಕೆಲಸಕ್ಕೆ ಸೇರಿದ್ದು ಆಂಗ್ಲಭಾಷಾ ಅಧ್ಯಾಪಕರಾಗಿ. ಆದರೂ ತಾರುಣ್ಯದಲ್ಲಿ ಕನ್ನಡದ ಮೇಲಿನ ಮಮತೆ. ಇದು ಬೇರೂರಿ ಬೆಳೆದು ದೊಡ್ಡ ಮರವಾಯಿತು. ಇವರು ಕನ್ನಡ ಸೇವಕರು ಮಾತ್ರವಾಗಲಿಲ್ಲ. ಪೋಷಕರೂ ಆದರು. ಕನ್ನಡ ಭಾಷೆ, ಸಾಹಿತ್ಯಗಳಲ್ಲಿನ ಅಕ್ಕರೆಯನ್ನು ಕನ್ನಡ ಬಾಲಕರಿಗೆ ದಿನನಿತ್ಯ ದಾನ ಮಾಡುತ್ತಿದ್ದರು.

ಶ್ರೀಯವರು ಆಂಗ್ಲ ಸಾಹಿತ್ಯದಲ್ಲಿನ ಪ್ರತಿಭೆಯನ್ನ ಕಂಡು ಆಶ್ಚರ್ಯಪಟ್ಟರು. ಆಂಗ್ಲ ವಿದ್ವಾಂಸರು ಹಲವರು. ಪ್ರೊ|| ಮ್ಯಾಕಿಂಟಾಷ್ ಎಂಬ ಆಂಗ್ಲ ವಿದ್ವಾಂಸರು ಒಂದು ಕಡೆ ಹೇಳಿದ್ದಾರೆ, "ಶ್ರೀಯವರು ಹಿಂದಿನ ಜನ್ಮದಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಆಂಗ್ಲ ಪ್ರೊಫೆಸರರೇ ಆಗಿದ್ದಿರಬೇಕು." ಆಂಗ್ಲ ಸಾಹಿತ್ಯದಲ್ಲಿ ಶ್ರೀಯವರಿಗಿದ್ದ ಪಾಂಡಿತ್ಯ ಮತ್ತು ಪ್ರತಿಭೆಯನ್ನು ಕಂಡು ಅವರು ಆಶ್ಚರ್ಯಪಟ್ಟರು.

ಶ್ರೀಯವರದು ಒಂದು ವಾಣಿ. ಶ್ರೀಕಂಠ ಎಂಬುದು ಮಾತು. ನಿಜವಾಗಿ ಅದು ಅವರ 'ಕಂಠ', ಆಕರ್ಷಕ. ಆ ಶ್ರೀಮಂತಿಕೆಯ ಲಕ್ಷಣ ಮಾತುಗಳಲ್ಲಿ ವರ್ಣಿಸಲಾಗದು. ಸದಾ ಕಿವಿಯಲ್ಲಿ ಝೇಂಕರಿಸುತ್ತಿದೆ. ಇದು ಉರಿಯುವ, ಹೊಗೆ ಉಗುಳುವ,

ಸುಡುವ ಬೆಂಕಿಯಲ್ಲ. ಬಿಳಿ ಬೆಳಕು ಜ್ಞಾನ ದೀವಿಗೆ. ಆದರೂ ಕಾವಿಲ್ಲದೆ ಇರುವುದೇ ! ಕಬ್ಬಿಣ ಕರಗಿಸುವ ಶಾಖ! ಹೀಗೆ ಅವರ ಮನಸ್ಸಿನ ಹಲವು ಬಗೆಯ ಲಕ್ಷಣಗಳನ್ನು ಕಾಣಬಹುದಿತ್ತು.

ಶ್ರೀಯುವರು ಒಂದು ವ್ಯಕ್ತಿಯಲ್ಲ. ಒಂದು ಶಕ್ತಿ. ಒಂದು ಪಂಥ. ಸಾವಿರಾರು ಮಂದಿಯಲ್ಲಿ ಕನ್ನಡ ನುಡಿಯ, ಕನ್ನಡ ಸಾಹಿತ್ಯದ ಪ್ರೇಮ ಬೆಳೆಯುವಂತೆ ಮಾಡಿದರು. ಗಾಂಧೀಜಿಯವರಂತೆ ಇವರದೂ ಒಂದು ಮಾರ್ಗ. ಇಂದು ಈ ಮಾರ್ಗದಲ್ಲಿ ನಾನಾ ಮುಖ್ಯವಾಗಿ ಕನ್ನಡದ ಕಾರ್ಯ ನಡೆಯುತ್ತಿದೆ. ಸಾಹಿತಿಗಳು, ಭಾಷಣಕಾರರು, ಪಂಡಿತರು, ಅಧ್ಯಾಪಕರು, ಹೀಗೆ ನಾನಾ ದಿಕ್ಕುಗಳಲ್ಲಿ ಅವರ ಮಾರ್ಗ ಅನುಸರಿಸುತ್ತಿರುವವರು ಅನೇಕರು. ಶ್ರೀಯುವರಲ್ಲಿ ಈ ಎಲ್ಲಾ ಗುಣಗಳಿವೆ. ಆದ್ದರಿಂದ ಶ್ರೀ ಒಂದು ಶಕ್ತಿ, ಒಂದು ಮಾರ್ಗ, ಒಂದು ಸಂಸ್ಥೆ, ಅವರು ತೋರಿಸಿದ ನಾನಾ ಮಾರ್ಗಗಳಲ್ಲಿ ಒಬ್ಬೊಬ್ಬರು ಒಂದೊಂದನ್ನು ಅನುಸರಿಸಿದರೆ ಸಾಕು. ಕನ್ನಡ ಸಾಹಿತ್ಯ ಎಷ್ಟೋ ಬೆಳೆಯುತ್ತೆ.

ಕನ್ನಡ ಭಾಷೆ ಭರತ ಖಂಡದಲ್ಲಿ ಸಮಾನ ಸ್ಥಾನ ಪಡೆಯುವಂತಾಗುವ ಹಂಬಲ. ಬೇರೆ ಪ್ರಾಂತಗಳಂತೆಯೇ ಸರಿಸಮಾನ ಗೌರವ ಪಡೆಯುವುದೇ ಶ್ರೀಯುವರ ಇಚ್ಛೆ.


"ಹೆರರ ನುಡಿ, ಹೆರರ ನಡೆ, ಹೆರರ ಕೂಗೇ ಕೂಗು.
ಹೇರರರದೇ ಹೆಮ್ಮೆ !
ನನ್ನ ಮನೆ ಹಾಳು !
ನನ್ನ ನುಡಿ ಬೀಳು ॥"

ಇದು ಕನ್ನಡಿಗರನ್ನು ಜಾಗೃತಗೊಳಿಸಿತು.



'ಇವತ್ತಿನ ಪಾಠದ ಭಾಗ ನೋಡಿ ಕೊಳ್ಳುತ್ತಿದ್ದೆ'

ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ



"ಕನ್ನಡ ನಾಡಿಗೆ ಕನ್ನಡವೇ ಗತಿ, ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ, ಇಂಗ್ಲೀಷಲ್ಲ, ಹಿಂದಿಯಲ್ಲ. ಕನ್ನಡ."

ಶ್ರೀಯವರು ಬೇರೆಯವರನ್ನು ನೋಯಿಸುತ್ತಿರಲಿಲ್ಲ. ಬೇರೆಯವರು ತಮ್ಮನ್ನು ಎಷ್ಟೇ ನೋಯಿಸಲಿ, ಗೊಣಗುಟ್ಟದೆ ಅನುಭವಿಸುವರು. ಮತ್ತೊಬ್ಬರಲ್ಲಿ ಹೇಳಿಕೊಳ್ಳುತ್ತಿರಲಿಲ್ಲ. ಹೃದಯದ ಕಾವು, ನೋವು, ಅವರ ತುಟಿಗಳಲ್ಲಿ ನಗೆಯಾಗಿ ಅರಳುತ್ತಿತ್ತು.

ಶ್ರೀಯವರಿಗೆ ಕೊನೆಯ ಕಾಲದಲ್ಲಿ ಆಪ್ತರು ಇರಲಿಲ್ಲ. ಸ್ನೇಹಕ್ಕೆ ಹಾತೊರೆಯುತ್ತಿದ್ದ ಜೀವ. ಆದರೂ ತಾವೇ ಮೇಲೆ ಬಿದ್ದು ಸ್ನೇಹ ಮಾಡಿಕೊಳ್ಳುವವರಲ್ಲ. ಇವರು ಸ್ನೇಹಿತರ ಸುಖ ಸಂತೋಷಗಳಲ್ಲಿ ಪಾಲುಗಾರರು. ನೋವಿನಲ್ಲಿ ಯಾರೂ ಹತ್ತಿರ ಸುಳಿಯಲಿಲ್ಲ. ತಮ್ಮ ನೊಂದ ಹೃದಯದ ಪ್ರದರ್ಶನಕ್ಕೆ ಎಂದಿಗೂ ಒಪ್ಪಲಿಲ್ಲ.

ಶ್ರೀಯವರಿಗೆ ಜೀವನದುದ್ದಕ್ಕೂ ಸುಖಕ್ಕಿಂತ ಕಷ್ಟವೇ ಹೆಚ್ಚು. ಆದರೆ ತೋರ್ಪಡಿಸಿಕೊಳ್ಳಲಿಲ್ಲ. ಜೀವನದಲ್ಲಿ ಗೆಲುವಿನಂತೆ ಸೋಲನ್ನು ನಗುನಗುತ್ತಲೇ ಸ್ವೀಕರಿಸಿದ್ದಾರೆ. ಕೀರ್ತಿಯೂ ಅವರನ್ನ ಬಿಡದೆ ಬಳಿಗೆ ಬಂತು.

'ಶ್ರೀ' ಕನ್ನಡ ಚಳವಳಿಯ ನೇತಾರರು. ನವಯುಗದ ಪ್ರವರ್ತಕರು. ಕನ್ನಡ ಸಾಹಿತ್ಯದ ಧ್ರುವನಕ್ಷತ್ರದಂತೆ ಸದಾ ಮಿನುಗುತ್ತಿರುತ್ತಾರೆ.

ಶ್ರೀಯವರ ಹೆಸರು ಶಾಶ್ವತವಾಗಿ ಉಳಿಯಲು ಅವರ

ಶಿಷ್ಯರಾದ ಪ್ರೊ॥ ಎಂ.ವಿ. ಸೀತಾರಾಮಯ್ಯನವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸ್ಥಾಪಿಸಿದ್ದಾರೆ. ಇವರೇ ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿ. ಹಿರಿಯರಾದ, ಮಾಜಿ ಮುಖ್ಯ ನ್ಯಾಯಾಧೀಶ ನಿಟ್ಟೂರು ಶ್ರೀನಿವಾಸರಾಯರೇ ಇದರ ಅಧ್ಯಕ್ಷರು.

ಶ್ರೀಯುತರಿಗೆ ಪ್ರಿಯವಾದ ಕನ್ನಡ ಸಾಹಿತ್ಯ ಪ್ರಚಾರ. ಅಭಿವೃದ್ಧಿ, ಸಂಶೋಧನೆಗಳನ್ನು ಈ ಪ್ರತಿಷ್ಠಾನ ಕೈಗೊಳ್ಳುತ್ತಿದೆ. ಪ್ರೊ॥ ಎಂ. ವಿ. ಸೀತಾರಾಮಯ್ಯನವರು ಶ್ರೀಯವರ ಅಚ್ಚುಮೆಚ್ಚಿನ ಶಿಷ್ಯರಲ್ಲಿ ಒಬ್ಬರು. ಈ ಪ್ರತಿಷ್ಠಾನದ ಸ್ಥಾಪನೆ ಗುರುಗಳಿಗೆ ಕೊಡುವ ಸರಿಯಾದ ಗುರುದಕ್ಷಿಣೆ ಅಲ್ಲವೆ! ಶ್ರೀಯವರ ಸ್ಮರಣಾರ್ಥ ಒಂದು ದಿವ್ಯಭವನ ನಿರ್ಮಾಣವನ್ನು ಕೂಡ ಯೋಜಿಸಿದ್ದಾರೆ. ಬಿ. ಎಂ. ಶ್ರೀಯವರ ಶತಮಾನೋತ್ಸವವನ್ನು ಜನವರಿ 3, 1984 ರಂದು, ಅವರ ಊರಾದ ಬೆಳ್ಳೂರಿನಲ್ಲಿಯೇ ವಿಜೃಂಭಣೆಯಿಂದ ನಡೆಸುತ್ತಿದ್ದಾರೆ. ನುಡಿ ಸೇವೆಯಲ್ಲಿ ಅಗ್ರಗಣ್ಯರಾದ ಶ್ರೀ ಜಿ. ನಾರಾಯಣ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರು. ಈ ಉತ್ಸವದಲ್ಲಿ ಭಾಗವಹಿಸಲು ನೀನೂ ಬಾ. ಇನ್ನೂ ಹೆಚ್ಚು ವಿಷಯವನ್ನು ತಿಳಿಯಬಹುದು. ಶ್ರೀಯವರ ಬಾಲ್ಯ, ವಿದ್ಯಾಭ್ಯಾಸ, ಸಾಹಿತ್ಯ ಸೇವೆ, ಕನ್ನಡ ನುಡಿಯ ಸೇವೆಗಳನ್ನು ನನಗೆ ತಿಳಿದಮಟ್ಟಿಗೆ ವಿವರಿಸಿದ್ದೇನೆ. ನಿನಗೆ ಕನ್ನಡ ಸಾಹಿತಿಗಳ ಬಗ್ಗೆ ಹೆಚ್ಚು ತಿಳಿದುಕೊಳ್ಳಬೇಕೆಂಬ ಆಸೆ ಇರುವುದು ನನಗೆ ಸಂತೋಷ. ಈಗ ಹೆಚ್ಚು ಓದಿ ನೀನೂ ಒಬ್ಬ ಕನ್ನಡ ಲೇಖಕಿಯಾಗಲು ಪ್ರಯತ್ನಿಸು.

ನಿನ್ನ ಪ್ರೀತಿಯ ಅಪ್ಪಾಜಿ,

ಹೊ. ಶ್ರೀ.

ಕನ್ನಡ ಮಕ್ಕಳೇ, ಶಶಿಗೆ ಬರೆದ ಪತ್ರಗಳನ್ನು ಓದಿದ್ದೀರಿ. ನಮ್ಮ ಕನ್ನಡ ನಾಡಿನ ಹಿರಿಯ ಸಾಹಿತಿ, ಆಚಾರ್ಯಪುರುಷ ಬಿ. ಎಂ. ಶ್ರೀಕಂಠಯ್ಯನವರ ಕಿರುಪರಿಚಯ ಈ ಕಾಗದಗಳಿಂದ ಆಗಿದೆಯಲ್ಲವೆ! ಆಗಿದ್ದರೆ ಈ ಪ್ರಯತ್ನದಲ್ಲಿ ನಾನು ಧನ್ಯ. ಹೀಗೆ ಕನ್ನಡನಾಡಿನ ಹಿರಿಯ ಸಾಹಿತಿಗಳ ಪರಿಚಯ ಮಾಡಿಕೊಳ್ಳಲು ಪ್ರಯತ್ನಿಸಿರಿ.

ಇಂತೀ ಆಶೀರ್ವಾದಗಳು
ಹೊ. ಶ್ರೀ.

ಪ್ರತಿಷ್ಠಾನದ ಪ್ರಕಟನೆಗಳು

1.	ಕೀರ್ತನ ಕುಸುಮಾಂಜಲಿ	10 00
2.	ಮಣಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ)	50 00
3.	ಬೇಂದ್ರೆಸ್ಮೃತಿ (ಸಾಹಿತ್ಯ ಭಂಡಾರದಲ್ಲಿ ದೊರೆಯುತ್ತದೆ)	5 00
4	ಸರ್ವಜ್ಞ ವಚನಗಳು	15 00
5.	ಸೂತ ಭಾರತ	15 00
6.	ಧ್ರುವ ಚರಿತ್ರ	15 00
7.	ಹಸ್ತಪ್ರತಿ ಶಾಸ್ತ್ರ	15 00
8.	ಶ್ರೀ ಕೃಷ್ಣದೇವರಾಯನ ದಿನಚರಿ	10 00
9.	ಮೂರು ದತ್ತಿ ಉಪನ್ಯಾಸಗಳು	10 00
10.	ಲೋಚನಾ (ಷಾಣ್ಮಾಸಿಕ ವಿದ್ವತ್ ಪತ್ರಿಕೆ) ವಾರ್ಷಿಕ ಚಂದಾ	6 00

ಸಿದ್ಧತೆಯಲ್ಲಿ

1. ತಿಮ್ಮಪ್ಪ ದಾಸರ 'ಶ್ರೀಕೃಷ್ಣಬಾಲಲೀಲೆ'

ಇತರ ಕೃತಿಗಳು

1.	ಅಧ್ಯಯನ (ಡಾ. ಶಂ. ಬಾ. ಜೋಶಿ ಅಭಿನಂದನ ಗ್ರಂಥ ಅಭಿನಂದನ ಸಮಿತಿಯ ಕೊಡುಗೆ)	50 00
2.	ಪ್ರೊ. ಎಂ ವಿ. ಸೀ. ಅವರ ಪುಸ್ತಕಗಳು (ಸೆಟ್ಟಿಗೆ) (ರಾಘವ ಪ್ರಕಾಶನದ ಕೊಡುಗೆ)	25 00
3.	ಕವಿ ಜಿಹ್ವಾಬಂಧನ (ಶ್ರೀಮತಿ ಕೆ. ಶಾಂತಾ ಅವರ ಕೊಡುಗೆ)	2 00
4.	ಕೈಲಾಸಂ ಅವರ ಐದು ನಾಟಕಗಳು (ಒಟ್ಟು) (ಶ್ರೀ ಬಿ. ಎಸ್. ರಾಮರಾಯರ ಕೊಡುಗೆ)	16 00
5.	ಷೇಕ್ಸ್‌ಪಿಯರನ 'ಹನ್ನೆರಡನೆಯ ರಾತ್ರಿ' (ಡಾ. ಪಿ. ವಿ. ನಾರಾಯಣ ಅವರ ಕೊಡುಗೆ)	6 00

1984–85 ಆಚಾರ್ಯ ಬಿ. ಎಂ. ಶ್ರೀಯವರ ಜನ್ಮ ಶತಮಾನೋತ್ಸವ ವರ್ಷ 3-1-1984ರಲ್ಲಿ ಸಂಪಿಗೆಯಲ್ಲಿ ಜನಿಸಿದ ಶ್ರೀಯವರ ಊರು ಬೆಳ್ಳೂರು. ಬಾಲ್ಯ ಶ್ರೀರಂಗಪಟ್ಟಣವಲ್ಲಿ. ಅಲ್ಲಿಯೇ ಪ್ರಾ[illegible]ದ ವಿದ್ಯಾಭ್ಯಾಸ; ಮೈಸೂರು, ಬೆಂಗಳೂರುಗಳಲ್ಲಿ ಪ್ರೌಢವಿದ್ಯಾಭ್ಯಾಸ : ಮದರಾಸಿನಲ್ಲಿ ಎಂ.ಎ. ಮತ್ತು ಬಿ.ಎಲ್. ಮಾಡಿಕೊಂಡು ಮೈಸೂರಿನಲ್ಲಿ ಇಂಗ್ಲೀಷ್ ಅಧ್ಯಾಪಕರಾದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲೀಷ್ ಪ್ರೊಫೆಸರಾಗಿ, ಗೌರವ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅಲ್ಲಿ ರಿಜಿಸ್ಟ್ರಾರ್ ಆಗಿದ್ದಾಗ ಮೊತ್ತಮೊದಲ ಭಾರಿಗೆ ಕನ್ನಡ ಎಂ.ಎ. ತರಗತಿ ಪ್ರಾರಂಭವಾಯಿತು. ಗುಲ್ಬರ್ಗ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾಗಿ, ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷರಾಗಿ, ಕನ್ನಡ ನಾಡು ನುಡಿಯ ಏಳ್ಗೆಗೆ ಜೀವನವನ್ನು ಮುಡಿಪಿಟ್ಟರು. ನಾಡಿನಲ್ಲೆಲ್ಲಾ ಸಂಚರಿಸಿ ಹರಿದು ಹಂಚಿಹೋಗಿದ್ದ ಕನ್ನಡ ನಾಡನ್ನು ಒಂದಾಗಲು ಇಂಗ್ಲೀಷ್ ಪ್ರಾಬಲ್ಯದಿಂದ ಅವಸ್ಥೆಗೆ ಈಡಾಗಿದ್ದ ಕನ್ನಡ ಭಾಷೆಯನ್ನು ಮೇಲೆತ್ತಲು ಕಂಕಣ ಬದ್ಧರಾಗಿದ್ದ ಶ್ರೀಯವರು "ಕನ್ನಡದ ಕಣ್ವ"ರೆನಿಸಿದರು. "ಇಂಗ್ಲೀಷ್ ಗೀತ"ಗಳನ್ನು ರಚಿಸಿ ಕನ್ನಡ ಕವಿ ಕುಲ ಗುರುವಾಗಿ, "ಶ್ರೀ" ಎಂದು ಪ್ರಸಿದ್ಧರಾದರು. ಮಹಾರಾಜರವರಿಂದ "ರಾಜಸೇವಾಸಕ್ತ" ಬಿರುದು ಪಡೆದವರು. 'ಅಶ್ವತ್ಥಾಮನ್' 'ಪಾರಸಿಕರು' 'ಗದಾಯುದ್ಧ' ನಾಟಕಗಳನ್ನು ಬರೆದು ಪಾಶ್ಚಾತ್ಯ ದುರಂತ ನಾಟಕ ಕಲ್ಪನೆಯನ್ನು ಮೊತ್ತ ಮೊದಲಿಗೆ ಕನ್ನಡಕ್ಕೆ ತಂದರು. ಇಂಥ ಸಾಹಿತ್ಯ ಯುಗಪ್ರವರ್ತಕರನ್ನು ನೆನೆಯುವುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಅವರ ನೆನಪನ್ನು ನಂದಾದೀವಿಗೆಯಾಗಿ ಬೆಳಗ ಹೊರಟಿರುವ ಬಿ. ಎಂ. ಶ್ರೀ ಸ್ಮಾರಕ ಪ್ರತಿಷ್ಠಾನಕ್ಕೆ ಕನ್ನಡಿಗರೆಲ್ಲರ ಸಹಾಯ, ಸಹಕಾರಗಳು ಅತ್ಯಗತ್ಯ.